

ಕಲ್ಯಾಣ ಕಿರಣ



ಆಗಸ್ಟ್ - 2009

ಬೆಲೆ-10.00
















ದೆಹಲಿಯಲ್ಲಿ ದಿ. 21-7-2009ರಂದು ಐ.ಎ.ಎಸ್. ಅಕ್ಯಾಡಮಿ ಉದ್ಘಾಟನೆಗೆ ಮುನ್ನ ಪೂಜೆ -ಕರಿಬಸಪ್ಪ ಕೋರಿಶೆಟ್ಟರ್, ಬಿ.ವೈ. ರಾಘವೇಂದ್ರ, ಪೂಜ್ಯ ಸ್ವಾಮೀಜಿ, ಧನರಾಜ ಜೀರಿಗೆ, ಜನಾರ್ಧನ ಸ್ವಾಮಿ, ಮಾತೆ ಸರ್ವಮಂಗಳಾದೇವಿ



ಉದ್ಘಾಟಿಸಿದ ಬಿ.ವೈ.ರಾಘವೇಂದ್ರ, ಸಂಸತ್ ಸದಸ್ಯರಿಗೆ ಸತ್ಕಾರ



ಹಿರಿಯ ಸಂಸತ್ ಸದಸ್ಯ ಡಿ.ಬಿ.ಚಂದ್ರೇಗೌಡರಿಗೆ ಸತ್ಕಾರ



ಚಿತ್ರದುರ್ಗ ಸಂಸತ್ ಸದಸ್ಯ ಜನಾರ್ಧನ ಸ್ವಾಮಿಯವರಿಗೆ ಸತ್ಕಾರ



ಲೋಕಾಯುಕ್ತ ನ್ಯಾಯಮೂರ್ತಿ ಶ್ರೀ ಸಂತೋಷ್ ಹೆಗಡೆ ಅವರಿಗೆ ಸತ್ಕಾರ(ದಿ.25-7-09)



ಬೆಂಗಳೂರು ವಿ.ವಿ.ಕುಲಪತಿ ಡಾ.॥ ಎನ್.ಪ್ರಭುದೇವ ಅವರಿಗೆ ಸತ್ಕಾರ



ಡಿ.ಸಿ.ಪಿ. ಬಸವರಾಜ ಮಾಲಗತ್ತಿ ಅವರಿಗೆ ಸತ್ಕಾರ



ಚೀಫ್ ಇಂಜಿನಿಯರ್ ಹುರುಪ್ರಸಾದ್ ಅವರಿಗೆ ಸತ್ಕಾರ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-39 ಸಂಚಿಕೆ-8 | ಬಸವ ಶಕೆ -876 ಆಗಸ್ಟ್-2009 | ಆಜೀವ ಸದಸ್ಯತ್ವ 1000 ರೂ. ವಾರ್ಷಿಕ ಚಂದಾ 100/- ರೂ.

ಬಸವ ಭಾನುವಿನ ಕ್ರಾಂತಿ ಉಷೆ

ಓ ಕ್ರಾಂತಿ ವೀರ, ನಿಮ್ಮಯ ವಾಣಿ
ಕನ್ನಡ ನೆಲವನೇ ಕುಣಿದಾಡಿಸಿತು
ಬಸವ ತತ್ವವನ್ನೇ ಮೆರೆದಾಡಿಸಿತು
ವಿಶ್ವ ಧರ್ಮವ ಹಬ್ಬಿ ಹಸರಿಸಿತು
ಸಮತೆಯ ಧ್ವಜವ ಹಾರಿಸಿತು ॥ 1 ॥

ನಿಮ್ಮಯ ಬೋಧೆ ಬುದ್ಧಿಯನರಳಿಸಿ
ಸುಪ್ತ ಚೇತನಗಳ ಎಚ್ಚರಗೊಳಿಸಿತು
ನಿರಭಿಮಾನಿಗಳ ನರನಾಡಿಯ ಮಿಡಿಸಿ
ಧರ್ಮದ ದುಂದುಭಿ ಮೊಳಗಿಸಿತು
ಕರ್ಮದ ಜಂಜಡ ಹರಿದೊಗೆಯಿಸಿತು ॥ 2 ॥

ಸ್ತ್ರೀ ಜಗದ್ಗುರು ಪೀಠವ ಸ್ಥಾಪಿಸಿತು
ದೀನದಲಿತರ ಮೇಲೆ ಧರ್ಮದ ಹೊನಲನು
ಹರಿಸುತ ಹೊಸ ಚೇತನವ ತುಂಬುತ ಬಂದಿತು
ವಿಶ್ವ ಧರ್ಮದ ವೇದಿಕೆ ರಚಿಸಿ
ಸಮತೆಯ ಘೋಷಣೆ ಮೊಳಗಿಸಿತು ॥ 3 ॥

ಸುಯಿಧಾನ ಸುಗ್ರಂಥ ಮಾಲೆಯ ಸೃಷ್ಟಿಸಿ
ಗ್ರಂಥ ಕುಸುಮಗಳನು ಅರಳಿಸಿತು
ಕ್ರಾಂತಿಯೋಗಿ ಬಸವಣ್ಣನ ಚಿತ್ರಿಸಿತು
ಕಲ್ಯಾಣ ಕಿರಣದ ಕಾಲುವೆ ಮೂಲಕ
ಜ್ಞಾನದ ಸುಜಲವ ಹರಿಯಿಸಿತು ॥ 4 ॥

ಧರ್ಮಕ್ರಾಂತಿಯ ಧೀರಯೋಗಿಯೇ
ಬಸವ ಧರ್ಮದ ಜ್ಞಾನಮದಕರಿಯೇ
ಗುರು ಬಸವೇಶನ ಕರುಣೆಯ ಕುಂಚವು
ಸ್ವಾಮಿ ಲಿಂಗಾನಂದರೆಂಬ ಧೀಮಂತ ಗುರುವ
ಜಗಕೆ ನೀಡಿತು, ಬಸವ ಪಥಿಕರ ಬಾಳನು ಬೆಳಗಿಸಿತು.॥ 5 ॥

- ಮಾತಾಜಿ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಮುಖಪುಟ: 1. ಬಸವ ಪಂಚಮಿಯಂದು ಧರ್ಮಗುರು ಬಸವಣ್ಣನವರಿಗೆ ವಿಶೇಷ ಪೂಜೆ, ಪುಷ್ಪವೃಷ್ಟಿ ಮತ್ತು ಆರತಿ.

2. ದಿ.25-7-09, ಪುರಭವನದಲ್ಲಿ ಬಸವ ಪಂಚಮಿಯ ಕಾರ್ಯಕ್ರಮದ ಉದ್ಘಾಟನೆ ಲೋಕಾಯುಕ್ತ ನ್ಯಾಯಮೂರ್ತಿ ಶ್ರೀ ಸಂತೋಷ್ ಹೆಗಡೆ ಅವರಿಂದ

ಹೊದ್ದಿಕೆಯ 2ನೆಯ ಪುಟ : ವೇದಿಕೆಯ ಭವ್ಯದೃಶ್ಯ ಮತ್ತು ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರದ ಚಿತ್ರಕಥೆಯ ಇಂಗ್ಲೀಷ್ ಆವೃತ್ತಿ ಬಿಡುಗಡೆ.

3ನೆಯ ಪುಟ: ದಿ.21-7-09ರಂದು ನವದೆಹಲಿಯ ಬಸವ ಮಂಟಪದಲ್ಲಿ ಐ.ಎ.ಎಸ್. ಅಕಾಡಮಿ ನಾಮಫಲಕ ಅನಾವರಣ, ಮತ್ತು ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರಾದ ಸುರೇಶ್ ಮತ್ತು ಬಸವರಸರಿಗೆ ಸತ್ಕಾರ.

4ನೆಯ ಪುಟ : ಶರಣ. ಹರ್ಡೇಕರ್ ಮಂಜಪ್ಪ ವಿರಚಿತ ಬಸವ ಬೋಧಾಮೃತ ಬಿಡುಗಡೆ -ಬೆಂಗಳೂರು ವಿ.ವಿ.ಕುಲಪತಿ ಡಾ॥ ಪ್ರಭುದೇವ ಅವರಿಂದ , ಪೂಜ್ಯ ಮಾತಾಜಿ ವಿರಚಿತ ಬಸವ ವಚನಾಮೃತ ಭಾಗ -2 ಬಿಡುಗಡೆ - ಪತ್ರಕರ್ತ ರವೀಂದ್ರ ರೇಷ್ಮೆ ಅವರಿಂದ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9036351066, 9620058492



ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಎಂಟನೆಯ

ಕಲ್ಯಾಣ ಪರ್ವ

2009ರ ಅಕ್ಟೋಬರ್ 2, 3 ಮತ್ತು 4 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಆವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 22ನೆಯ ಶರಣ ಮೇಳವು ಇದೇ 2009ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ " ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2007ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 8ನೆಯ ಕಲ್ಯಾಣ ಪರ್ವವನ್ನು 2009 ರ ಅಕ್ಟೋಬರ್ 2, 3 ಮತ್ತು 4 ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು

ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ **ಎಮ್ಮ ಭಕ್ತಿ ಬಣ್ಣವೇರಿತು"** ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 1ರ ರಾತ್ರಿಯಿಂದ ಅಕ್ಟೋಬರ್ 5 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ
5. ಸ್ವಾಗತ ಸಮಿತಿ ಸದಸ್ಯತ್ವ : 300 ರೂ
6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F. D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ
ಬಸವ ಮಹಾಮನೆ, ಬಸವ ಕಲ್ಯಾಣ -585327, ಜಿಲ್ಲೆ-ಬೀದರ್
☎ : 08481-251921/252856

ಬಸವ ಕಲ್ಯಾಣದಲ್ಲಿ 108 ಅಡಿಯ ಬೃಹತ್ ಬಸವ ಪುತ್ಥಳಿಯ ನಿರ್ಮಾಣ ಯೋಜನೆ



ಬಸವ ಧರ್ಮ ಪೀಠ ಟ್ರಸ್ಟ್ ಬಸವ ಕಲ್ಯಾಣದಲ್ಲಿ ಸುಮಾರು 22 ಎಕರೆ ಜಮೀನನ್ನು ಖರೀದಿಸಿದ್ದು, ಶರಣ ಶೈಲ ಎಂಬ ಪ್ರದೇಶದಲ್ಲಿ ಗುರು ಬಸವಣ್ಣನವರ ಅಭಯ ಮುದ್ರೆಯ 108 ಅಡಿ ಮೂರ್ತಿಯನ್ನು ನಿರ್ಮಿಸುತ್ತಿದೆ. ಇದಕ್ಕೆ ಅಡಿಪಾಯವಾಗಿ 24 ಅಡಿ ಎತ್ತರದ ಎರಡು ಅಂತಸ್ತಿನ ಕಟ್ಟಡವು ಈಗಾಗಲೇ ರೂಪುಗೊಂಡಿದ್ದು, ಇದೇ 21-1-2009ರಂದು ವೇದಿಕೆಯ ಮೇಲಿನ ಮೂರ್ತಿಯ ಆಕಾರದ ಕೆಲಸಕ್ಕೆ ಚಾಲನೆ ನೀಡಲಾಗಿದೆ. ಎರಡೂವರೆ ಕೋಟಿ ರೂಗಳ 108 ಅಡಿಯ ಬೃಹತ್ ಮೂರ್ತಿಯ ಯೋಜನೆಗೆ ಉದಾರವಾಗಿ ದೇಣಿಗೆ ನೀಡುವವರಿಗೆ ಅವಕಾಶವಿದೆ. ಆದ್ದರಿಂದ ತಮ್ಮ ಶಕ್ತ್ಯಾನುಸಾರ ಬೃಹತ್ ಬಸವ ಪುತ್ಥಳಿ ನಿರ್ಮಾಣಕ್ಕೆ ಭಕ್ತಿ ಪೂರ್ವಕವಾಗಿ ಧನ ಸಹಾಯ ಮಾಡುವ ಸಹೃದಯರಿಂದ ದೇಣಿಗೆ ಸಂಗ್ರಹಿಸುವುದು ಉದ್ದೇಶ.

1. 11,000 (ಹನ್ನೊಂದು ಸಾವಿರ)ಮತ್ತು ಮೇಲೆ ಕೊಟ್ಟವರ ಹೆಸರನ್ನು ಡೋನರ್ ಬೋರ್ಡ್, ದಾನಿಗಳ ಫಲಕದಲ್ಲಿ ಬರೆಸಲಾಗುವುದು.
2. 25,000 (ಇಪ್ಪತ್ತೈದು ಸಾವಿರ)ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್‌ನಲ್ಲಿ ಕೆತ್ತಿಸಲಾಗುವುದು.
3. 50,000(ಐವತ್ತು ಸಾವಿರ)ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರುಬದಿಗಳಲ್ಲಿ (ಹಿಂದೆ, ಎಡ,ಮತ್ತು ಬಲ ಪಕ್ಕ)ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದು.
4. 1,00,000 (ಒಂದು ಲಕ್ಷ)ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ ಬರುವ ಸ್ಥಳಗಳಲ್ಲಿ ಒಂದು ಕಡೆ ಒಳಗಿನ ಮ್ಯುಸಿಯಮ್‌ನಲ್ಲಿ ಹಾಕಿಸಲಾಗುವುದಲ್ಲದೆ ಅವರ ಒಂದು ಫೋಟೋ ಸಹ ಪ್ರದರ್ಶಿಸಲಾಗುವುದು.

ವಿಶೇಷ ಸೂಚನೆ: ಗುರು ಬಸವಣ್ಣನವರ ಬೃಹತ್ ಪುತ್ಥಳಿಯ ನಿರ್ಮಾಣಕ್ಕೆ ಸಹಕಾರ ನೀಡುವ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80G ಇನ್‌ಕಂ ಟ್ಯಾಕ್ಸ್ ರಿಯಾಯಿತಿ ಸೌಲಭ್ಯವನ್ನು ಪಡೆದಿದ್ದು ದಾನಿಗಳು ಇದರ ಸದುಪಯೋಗ ಮಾಡಿಕೊಳ್ಳಬಹುದು.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು
ಪ್ರಧಾನ ಸಂಚಾಲಕರು,ಕಲ್ಯಾಣ ಜ್ಯೋತಿ ಯಾತ್ರೆ
ಬಸವ ಮಂಟಪ, 20ನೆಯ ಮುಖ್ಯರಸ್ತೆ
ರಾಜಾಜಿ ನಗರ, ಬೆಂಗಳೂರು-560010
080-22923736/98802-96108

ಪೂಜ್ಯ ಶ್ರೀ ಸಿದ್ದರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು
ಜಗದ್ಗುರು ಅಲ್ಲಮ ಪ್ರಭು ಶೂನ್ಯ ಪೀಠ
ಬಸವ ಕಲ್ಯಾಣ, ಜಿ- ಬೀದರ್
08481-251921/94487-32456

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
08351-268007/268014

ವಿಚಾರ ಕ್ರಾಂತಿಯ ಆಚಾರ ಜ್ಯೋತಿ

ಪೂಜ್ಯ ಲಿಂಗಾನಂದರು

ಬಿಳಿ ಜೋಳದ ಸಿರಿ ಬೆಳವಲ ನಾಡಿನ
ಮಣಿಗವಳ್ಳಿಯ ಗ್ರಾಮದೊಳು ।
ಕಡು ಬಡತನದಲ್ಲಿ ಉದಿಸಿದ ದಿನಮಣಿ
ಬೆಳಗಿತು ವಿಶ್ವ ದಿಗಂತದೊಳು ॥ 1 ॥

ಸಿಂಹದ ಮರಿಯಿದು ಸಿಡಿಲಿನ ಕುಡಿಯು
ಲಿಂಗಾನಂದರೆಂಬ ಶುಭನಾಮದೊಳು
ಪ್ರವಚನವೆಂಬುವ ಪರುಷವ ಹಿಡಿದು
ಭಾರ್ಗವನಂತೆ ಭೂವನ ಸಂಚಾರದೊಳು ॥2॥

ಮಿಥ್ಯವ ಕೊಸರಿ ಸತ್ಯವ ಉಸುರಿ
ಸದ್ಧರ್ಮದ ಕಹಳೆಯ ಮೊಳಗಿಸಿದೆ ।
ಮೌಢ್ಯತೆ ತುಂಬಿದ ಅಂಧ ಸಮಾಜದ
ಕಂದಾಚಾರಗಳನ್ನು ಖಂಡಿಸಿದೆ ॥ 3 ॥

ಡಾಂಭಿಕ ಸ್ವಾಮಿಗಳ ಗುಂಡಿಗೆ ನಡುಗಿಸಿ
ಪುರೋಹಿತರ ಪುಂಗಿಯ ಅಡಗಿಸಿದೆ ।
ಬೂಟಕ ತನದಲ್ಲಿ ನಾಟಕ ಮಾಡುವ
ಆಷಾಡಭೂತಿಗಳ ಬಾಯಿ ಮುಚ್ಚಿಸಿದೆ ॥ 4 ॥

ಬಸವಣ್ಣನ ಹೆಸರಲಿ ಬಸಿರನು ಬೆಳೆಸುವ
ಗುರು -ವಿರಕ್ತರ ಇಂಗಿತವ ವಿವರಿಸಿದೆ ।
ಜಾತಿಯ ಗೂಟಕ್ಕೆ ನೇತಾಡುವ ಹೆಣಗಳ
ನಿಜ ಸ್ವರೂಪವ ತೋರಿಸಿದೆ ॥ 5 ॥

ಮಾತಿನ ಮಲ್ಲರ ಭ್ರಾಂತಿಯ ಬಿಡಿಸಿ
ನೂತನ ಕ್ರಾಂತಿಯ ಮೂಡಿಸಿದೆ ।
ವಚನಗಳನು ಪ್ರವಚನಕ್ಕೆ ಪರಿವರ್ತಿಸಿ
ಶರಣ ಸಾಹಿತ್ಯವ ಪಸರಿಸಿದೆ ॥ 6 ॥

ಧರ್ಮಕ್ಷೇತ್ರ ಕೂಡಲ ಸಂಗಮದ
ಮಹತಿಯ ಮನವರಿಕೆ ಮಾಡಿಸಿದೆ
ಬಸವ ಭಕ್ತರನು ಒಂದು ಗೂಡಿಸಲು
ಶರಣ ಮೇಳವನು ರಚಿಸಿದೆ ॥ 7 ॥

ಬಸವ ಧರ್ಮದ ಬಳ್ಳಿಯ ಹಬ್ಬಲು
ಬಸವ ದಳಗಳನು ಸ್ಥಾಪಿಸಿದೆ
ಮಹಾಜ್ಞಾನಿ ಪೂಜ್ಯ ಮಾತಾಜಿಯಂತಹ
ಮಹಿಮಾನ್ವಿತರನು ರೂಪಿಸಿದೆ ॥ 8 ॥

ಗುರು ಬಸವಣ್ಣನ ಚಿದ್ಗರ್ಭದಿ ಉದಿಸಿ
ಧರ್ಮದ ಪ್ರಭೆಯನು ಪಸರಿಸಿದೆ ।
ಮಣಹ ಪೂರೈಸುತ ಕರ್ತನ ಕರೆಗೆ
ಲಿಂಗದೇವನೊಳು ಬಯಲಾದೆ ॥ 9 ॥

ಶರಣ. ಮಹಾದೇವ ಗುಡೇರ
ರಾ.ಬ.ದಳ, ಗೋಕಾಕ್

ಬಸವ ಪರುಷ

ಜಗದ ಕೋಟಿ ಮನುಜರೆಲ್ಲ
ಬಸವ ಪರುಷ ಮಿಟ್ಟರೆಲ್ಲ
ಮನದ ಕೊಳೆಯ ಕಳೆಯಿರೆಲ್ಲ
ಹೊನ್ನ ಗುಣವ ಪಡೆಯಿರೆಲ್ಲ ॥ 1 ॥

ಕೀಳು ಕುಲದಿ ಹುಟ್ಟಿದೆವೆಂದು
ಮನದಿ ಬಳಲಿ ನೊಂದರಂದು
ಬಸವ ಪಾದ ಸ್ಪರ್ಶದಿಂದ
ಶರಣರಾದರೆಲ್ಲ ಅಂದು ॥ 2 ॥

ಕೆಟ್ಟ ಬದುಕು ನಮ್ಮದೆಂದು
ಪತಿತ ಹಲವು ಸ್ತ್ರೀಯರೆಂದು
ಕೊರಗು ತಿರಲು ಮನದಿನೊಂದು
ನವ ಬದುಕುತೋರ್ದ ಬಸವನೊಂದು ॥ 3 ॥

ಹಸ್ತಪರುಷ ಪಾದ ಪರುಷ
ಬಸವ ವಾಣಿ ದಿವ್ಯ ಪರುಷ
ವಚನ ಶಾಸ್ತ್ರ ಜ್ಞಾನ ಪರುಷ
ಜ್ಞಾನ ಪರುಷದೆ ಪಡೆಯುವ ಹರುಷ ॥4॥

ಶರಣೆ.ನಿರ್ಮಲಾ ಪ್ರಭಾಕರ್
ಗನ್ನಾಯ್ಕನ ಹಳ್ಳಿ

ಸಂಪಾದಕೀಯ : - ಮಾತಾಜಿ

1. ಎಲ್ಲ ಲಿಂಗಾಯತರೂ ವೀರಶೈವ ಲಿಂಗಾಯತರೇನಲ್ಲ

ಕಂದಾಯ ಇಲಾಖೆಯಿಂದ, ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಬೇಕೆಂದು ಅರ್ಜಿ ಹಾಕಿದಾಗ, ಲಿಂಗಾಯತರು ತಮ್ಮ ಜಾತಿಯ (ಧರ್ಮದ) ಹೆಸರನ್ನು ಸ್ಪಷ್ಟವಾಗಿ ಕಾಣಿಸಿದ್ದರೂ ಕೂಡ ತಹಸೀಲ್ದಾರರು ಲಿಂಗಾಯತರೆಲ್ಲರಿಗೂ ವೀರಶೈವ ಲಿಂಗಾಯತ ಎಂದು ಜಾತಿ ಪ್ರಮಾಣ ಪತ್ರ ಕೊಡುತ್ತಿದ್ದಾರೆ. ಬೈಲಹೊಂಗಲದ ರಾಷ್ಟ್ರೀಯ ಬಸವ ದಳದ ಶರಣ ವೀರೇಶ ಹಲಕಿ ಎಂಬುವವರು ಮೊಟ್ಟ ಮೊದಲು ನಮ್ಮ ಗಮನಕ್ಕೆ ತಂದರಲ್ಲದೆ 2002ನೆಯ ಇಸವಿಯಿಂದಲೂ ತಾವು ಪಡೆದ ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಗಳನ್ನು ಕಳಿಸಿದ್ದಾರೆ. ಹಿಂದಿನ ಎಲ್ಲ ವರ್ಷಗಳಲ್ಲಿ ಲಿಂಗಾಯತ ಎಂದೇ ಬರೆಯಲಾಗಿದೆ. 2009ರಲ್ಲಿ ವಿತರಿಸಿದ ಪ್ರಮಾಣ ಪತ್ರದಲ್ಲಿ ಮಾತ್ರ ವೀರಶೈವ ಲಿಂಗಾಯತ ಎಂದು ತಹಸೀಲ್ದಾರರು ಕಾಣಿಸಿದ್ದಾರೆ. ಈ ಬದಲಾವಣೆ ಏಕೆ? ಮತ್ತು ಹೇಗೆ? ಎಂದು ಆಕ್ಷೇಪಿಸಿದರೆ ಸರ್ಕಾರದಿಂದ ಆ ರೀತಿಯ ಸುತ್ತೋಲೆ ಇದೆ ಎಂದು ಉತ್ತರಿಸುತ್ತಾರಂತೆ.

ಒಬ್ಬ ವ್ಯಕ್ತಿಯು ತನ್ನ ಜಾತಿ ಅಥವಾ ಧರ್ಮ ಯಾವುದು ಎಂದು ಘೋಷಿಸುವನೋ ಅದನ್ನು ಜಾತಿ ಪ್ರಮಾಣ ಪತ್ರದಲ್ಲಿ ಕಾಣಿಸಬೇಕೆಂಬುದು ನಿಯಮ. ಅರ್ಜಿದಾರ ಘೋಷಿಸದಿರುವ ಸಂಗತಿಯನ್ನು ತಹಸೀಲ್ದಾರರು ಕಾಣಿಸಲು ಅವರಿಗೆ ನೈತಿಕ ಹಕ್ಕು ಏನಿದೆ? ಯಾರದೋ ಚಿತಾವಣೆಯಿಂದ ಇಂತಹ ಸುತ್ತೋಲೆ ಹೊರಟಂತೆ ಕಾಣುತ್ತದೆ.

12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತ ಲಿಂಗದೇವನ ಕುರುಹಾಗಿ, ಗಣಲಾಂಛನವಾಗಿ ಇಷ್ಟಲಿಂಗವನ್ನು ಕೊಟ್ಟರು. ಈ ಲಾಂಛನವನ್ನು ಧರಿಸಿದವರೆಲ್ಲ ಲಿಂಗಾಯತ (ಲಿಂಗವಂತ)ರು ಮತ್ತು ಸಮಾನರು ಎಂದು ಸಾರಿದರು. ಆಗ ಎಲ್ಲ ಜಾತಿ ಮತ ಪಂಥ ಉದ್ಯೋಗಗಳ ಜನರು, ಸಮುದಾಯಗಳು ಲಿಂಗಾಯತ ಧರ್ಮವನ್ನು ಸ್ವೀಕಾರ ಮಾಡಿದರು. ಹೀಗಾಗಿ ಇವರೆಲ್ಲ ಲಿಂಗಾಯತ ಸಮಾಜದ ಉಪಜಾತಿಗಳಾಗಿ ಉಳಿದಿದ್ದಾರೆ.

ಲಿಂಗಾಯತ ಸಮಾಜದಲ್ಲಿ ಇರುವ ಉಪಜಾತಿಗಳು ಕೆಳಗಿನಂತಿವೆ. 1881ನೆಯ ಇಸವಿಯಲ್ಲಿ ಆದ ಜನಗಣತಿಯ ಪ್ರಕಾರ :

ಮೈಸೂರು ಪ್ರಾಂತ್ಯದಲ್ಲಿ ಲಿಂಗಾಯತ ಸಮಾಜದಲ್ಲಿ ಪ್ರಚಲಿತವಿದ್ದ ಒಳ ಜಾತಿಗಳು.

1.	ಲಿಂಗಾಯತ	- ಆರಾಧ್ಯ	2.	ಲಿಂಗಾಯತ	- ಅಯ್ಯ
3.	,,	- ಬಡಗಲವ	4.	,,	- ಬಣಜಿಗ
5.	,,	- ಬಣ್ಣದವ	6.	,,	- ಬಸಳೆ
7.	,,	- ಬಣವೆ	8.	,,	- ಗದ್ದಿಗೆಯವ
9.	,,	- ಗೌಡ ಲಿಂಗಾಯತ	10.	,,	- ಗಣಾಧೀಶ್ವರ
11.	,,	- ಗೌಡಮನೆ	12.	,,	- ಗೌಳಿಗ
13.	,,	- ಗುರುಶೀಲ	14.	,,	- ಹಿರಿಶುಭೆ
15.	,,	- ಜಂಗಮ	16.	,,	- ಜ್ಯೋತಿ ಬಣಜಿಗ
17.	,,	- ಕಮಾಡಿ ಗೌಡ	18.	,,	- ಕಾಂತಪಾವಡಿ
19.	,,	- ಕಾಯ ಕೋಳ	20.	,,	- ಕೋರಿ ಶೆಟ್ಟಿ
21.	,,	- ಲಿಂಗಾಯತ	22.	,,	- ಮಾಳವ
23.	,,	- ಮೇಲಪಾವಡಿ	24.	,,	- ನೊಣಬ
25.	,,	- ನೀರ ಮೇಲಿನವ	26.	,,	- ಪೇಟೆಮನೆ
27.	,,	- ಪಂಚಾಚಾರ ಗೌಡ	28.	,,	- ಸಾದರು
29.	,,	- ಸಜ್ಜನರು	30.	,,	- ಷಟ್‌ಸ್ಥಲ
31.	,,	- ಶೀಲವಂತ	32.	,,	- ಶೈಲದವ
33.	,,	- ತಮಿಳು ಜಂಗಮ	34.	,,	- ತಮ್ಮಡಿ

35.	''	- ತೊಗಸೆಟ್ಟಿ	36.	''	- ಒಡೇರು
37.	''	- ತುರುಕಾನೆ ಬಣಜಿಗ	38.	''	- ವೀರಶೈವ

1881 ರಲ್ಲಿ ದಾಖಲೆಯಾಗಿರುವ ಪಟ್ಟಿ ನೋಡಿರಿ. ಲಿಂಗಾಯತ ಸಮಾಜದೊಳಗೆ 38 ಒಳಜಾತಿಗಳನ್ನು ಗುರುತಿಸಲಾಗಿದ್ದು ಇದರಲ್ಲಿ ವೀರಶೈವ ಒಂದು ಉಪ ಪಂಗಡ ಮಾತ್ರ; ಕೇರಳದ 1881 ರ ಜನಗಣತಿಯಲ್ಲಿ ಎಸ್.ನಂ. 445 ರಿಂದ 449 ರವರೆಗೆ ಪುಟ 347 ರಲ್ಲಿ ಕೇವಲ ಲಿಂಗಾಯತ ಎಂಬ ಹೆಸರು ಮಾತ್ರ ದಾಖಲಾಗಿದೆ. Imperial Census of India 1881 - Operation and results in the presidency of Madras (Book No. 315 - 482 IND 1881, Volume - 4)

ಇದರಿಂದ ತಿಳಿಯುವುದೇನೆಂದರೆ, ಲಿಂಗಾಯತ ಸಮಾಜದಲ್ಲಿ ವೀರಶೈವರು ಸಹ ಒಂದು ಉಪಜಾತಿ. ಆಂಧ್ರ ಮೂಲದಿಂದ, ತಮಿಳುನಾಡು ಮೂಲದಿಂದ ಬಂದು ಲಿಂಗಾಯತ ಧರ್ಮವನ್ನು ಸ್ವೀಕರಿಸಿದವರು. ಆದ್ದರಿಂದ ಎಲ್ಲ ಲಿಂಗಾಯತರನ್ನು ವೀರಶೈವ ಲಿಂಗಾಯತರು ಎಂದು ಕರೆಯಲಾಗುವುದಿಲ್ಲ.

ಈ ಕಟು ಸತ್ಯವನ್ನು ಸರ್ಕಾರವು ಅರ್ಥ ಮಾಡಿಕೊಂಡು ಈಗ ಹೊರಡಿಸಿರುವ ಸುತ್ತೋಲೆಯನ್ನು ವಾಪಸ್ಸು ಪಡೆದು, ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕಾಣಿಸಿದಂತೆ ಜಾತಿಯನ್ನು ಪ್ರಮಾಣ ಪತ್ರದಲ್ಲಿ ಕಾಣಿಸಬೇಕೆಂದು ಸೂಚಿಸುತ್ತೇವೆ.

2. ಜಾತಿವಾರು ಜನಗಣತಿ

ರಾಜ್ಯದ ಹಿಂದುಳಿದ ಆಯೋಗದ ವತಿಯಿಂದ ಜಾತಿವಾರು ಜನಗಣತಿಯು ನಡೆಯಲಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಈ ಕೆಲಸವನ್ನು ಮಾಡಲು ಈಗಾಗಲೇ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅನುದಾನವನ್ನು ಬಿಡುಗಡೆ ಮಾಡಿವೆ. ಜಾತಿವಾರು ಜನಗಣತಿಯನ್ನು ಬ್ರಿಟಿಷರ ಆಡಳಿತವಿದ್ದಾಗ ಒಮ್ಮೆ ಮಾಡಲಾಗಿತ್ತು. ಸಾವಿರಾರು ಜಾತಿ, ಉಪ ಜಾತಿಗಳು ಇರುವ ಈ ದೇಶದಲ್ಲಿ ಇಂಥದೊಂದು ಜಾತಿವಾರು ಜನಗಣತಿಯ ಪ್ರಯೋಜನ ಅಷ್ಟಾಗಿ ಆಗದಿದ್ದರೂ ತೀರಾ ಚಿಕ್ಕಪುಟ್ಟ ಜಾತಿ ಗುಂಪುಗಳೂ ದಾಖಲೆಗೊಳ್ಳುತ್ತವೆ ಎಂಬುದು ಆಯಾ ಜಾತಿಗಳವರಿಗೆ ಸಮಾಧಾನ ತರುತ್ತದಷ್ಟೆ.

ಲಿಂಗಾಯತವು ಒಂದು ಧರ್ಮವೂ ಆಹುದು. ಇಂದು ಅದು ರೂಪುಗೊಂಡಿರುವ ರೀತಿಯಲ್ಲಿ ಜಾತಿಯೂ ಆಹುದು. ಜಾತಿಯು ಹುಟ್ಟಿನಿಂದ, ತಾಯಿ -ತಂದೆಯಿಂದ ಬರುತ್ತದೆ. ಧರ್ಮವು ದೀಕ್ಷಾಸಂಸ್ಕಾರದಿಂದ, ಗುರುವಿನ ಮೂಲಕ ಬರುತ್ತದೆ. ಲಿಂಗಾಯತ ತಾಯಿ ತಂದೆಯಲ್ಲಿ ಹುಟ್ಟಿದ ಮಗ/ ಮಗಳು ಲಿಂಗಾಯತರು ಎಂಬುದು ಜಾತಿ. ಆದರೆ ಧರ್ಮವೂ ಆಗಿರುವುದರಿಂದ ಮಗುವಿಗೆ ಹೆಣ್ಣು - ಗಂಡು ಎಂಬ ಭೇದವಿಲ್ಲದೆ ಲಿಂಗಧಾರಣೆ ಮಾಡಲಾಗುವುದು; ನಂತರ 12 -13 ವಯಸ್ಸಿನಲ್ಲಿ ಲಿಂಗದೀಕ್ಷೆಯನ್ನು ಮಾಡಲಾಗುವುದು.

ಜಾತಿವಾರು ಜನಗಣತಿಯ ಫಾರ್ಮು ಏನಿದೆ? ಹೇಗಿದೆ ? ಎಂದು ಸುಮಾರು 8-9 ತಿಂಗಳ ಹಿಂದೆಯೇ ಹಿಂದುಳಿದ ವರ್ಗದ ಆಯೋಗದವರನ್ನು ಕೇಳಲಾಗಿತ್ತು. ಅದನ್ನು ಅವರು ಕೊಡಲಿಲ್ಲ. ಈಗ ಗಣತಿದಾರರು ಮನೆಗೆ ಬಂದಾಗ ತಾವು ಸರಿಯಾಗಿ ಅದನ್ನು ನೋಡಿರಿ. ಧರ್ಮ, ಜಾತಿ, ಉಪಜಾತಿ ಎಂಬ ವಿವರ ಕೇಳಿದರೆ ಧರ್ಮ -ಲಿಂಗಾಯತ, ಜಾತಿ -ಲಿಂಗಾಯತ, ಉಪಜಾತಿ- ಬಣಜಿಗ/ ಪಂಚಮಸಾಲೆ/ ಸಾದು/ ರೆಡ್ಡಿ /ಹಡಪದ ಇತ್ಯಾದಿ ಬರೆಯಬಹುದು. ಕೇವಲ ಜಾತಿ ಒಂದೇ ಕೇಳಿದರೆ ಲಿಂಗಾಯತ ಎಂದು ಬರೆಸಿರಿ. ಲಿಂಗಾಯತ ಜನಗಣತಿ ಕ್ರೋಡೀಕರಿಸಲು ಇದು ಬಹಳ ಒಳ್ಳೆಯ ಅವಕಾಶ. ಕೇಂದ್ರ ಸರ್ಕಾರದ ಜನಗಣತಿ (2011ರಲ್ಲಿ) ಯಲ್ಲಿ ಪ್ರತ್ಯೇಕ ಅಂಕಣಕ್ಕಾಗಿ ಪ್ರಯತ್ನಿಸಲಾಗುತ್ತಿದೆಯಾದರೂ, ಅದಕ್ಕಿಂತ ಮೊದಲೇ ಕರ್ನಾಟಕದಲ್ಲಿ ಜಾತಿವಾರು ಜನಗಣತಿ ಬಂದಿರುವುದರಿಂದ ಜನಸಂಖ್ಯೆ ತಿಳಿಯಲು ಒಳ್ಳೆಯ ಅವಕಾಶ ಬಂದಂತಾಗಿದೆ. ಪ್ರಜಾಪ್ರಭುತ್ವದಲ್ಲಿ ಜನ ಸಂಖ್ಯೆಯು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದ ಲಿಂಗಾಯತ ಪದವನ್ನೇ ದಾಖಲಿಸಬೇಕೆಂದು ಕಳಕಳಿಯಿಂದ ಸೂಚಿಸುತ್ತೇವೆ.

ಬಸವ ವಚನಾಮೃತ

237. ಮಾಡುವ ನೀಡುವ ಮರ್ಮ

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ;
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ!
ಮಾಡುವ ನೀಡುವ ನಿಜಗುಣವುಳ್ಳಡೆ
ಕೂಡಿಕೊಂಬ ನಮ್ಮ ಲಿಂಗದೇವ! -ಬ.ವ.ದೀ.235

ಅನೇಕರು ಕೆಲವು ಕ್ರಿಯೆಗಳನ್ನು ಮಾಡುತ್ತಿರುತ್ತಾರೆ. ಆದರೆ ಅವರು ಮನಃ ಪೂರ್ವಕವಾಗಿ ಮಾಡುವುದಿಲ್ಲ. ಆಗ ಅದು ಸಾರ್ಥಕತೆಯನ್ನು ಸಾಧಿಸುವುದಿಲ್ಲ. ಮಾಡುವ ಮತ್ತು ನೀಡುವ ಎಂಬ ಪದಗಳ ಹಿಂದೆ ಒಂದು, ಶರೀರವನ್ನು ತೊಡಗಿಸಿ ಮಾಡುವ ಕಾಯಕ ಕುರಿತು, ಇನ್ನೊಂದು ಮನವನ್ನು ತೊಡಗಿಸಿ ಮಾಡುವ ದಾಸೋಹ ಕುರಿತು ಧರ್ಮಪಿತ ಬಸವಣ್ಣನವರು ಹೇಳಿರಬಹುದು ಎನ್ನಿಸುತ್ತದೆ.

ಶರೀರದಿಂದ ಮಾಡುವ ಕ್ರಿಯೆಯಾದ ಕಾಯಕವನ್ನು, ಅಥವಾ ಚಟುವಟಿಕೆಯನ್ನು ಬಲವಂತವಾಗಿ ಇನ್ನೊಬ್ಬರ ಒತ್ತಾಯಕ್ಕೆ ಮಣಿದು ಮಾಡಬಹುದು. ಉದಾಹರಣೆಗೆ ಗುರು - ಜಂಗಮರು ಬಂದಾಗ ಅಥವಾ ನಂಟರಿಷ್ಟರು ಬಂದಾಗ ದಾಕ್ಷಿಣ್ಯಕ್ಕಾಗಿ ಅಥವಾ ಇನ್ನೊಬ್ಬರ ಒತ್ತಡದಿಂದ ಅವರಿಗೆ ಉಪಚಾರ ಮಾಡಬಹುದು. ಅದು ಸ್ವಯಂ ಪ್ರೇರಣೆಯ ಸೇವೆ ಆಗಿರದು. ಅದೇ ರೀತಿ ದಾಸೋಹಕ್ಕೆ ನೀಡುವಾಗ ಸ್ವಸಂತೋಷವಿಲ್ಲದೆ ಯಾರದೋ ಒತ್ತಾಯಕ್ಕೆ ಮಣಿದು ನೀಡಬಹುದು. ಇದರಿಂದ ಹಾಗೆ ಕಾಟಾಚಾರಕ್ಕೆ ಮಾಡುವ, ನೀಡುವ ಕ್ರಿಯೆ ಮಾಡುವವರಿಗೂ ಸಂತೋಷ ನೀಡದು ಮಾಡಿಸಿಕೊಳ್ಳುವವರಿಗೂ ಸಂತೋಷ ತರದು.

ಕಾಯಕ ಮಾಡುವುದರಲ್ಲಿ, ಸೇವೆ ಮಾಡುವುದರಲ್ಲಿ ವ್ಯಕ್ತಿಗೆ ಆನಂದವಿದ್ದರೆ ದಾಸೋಹಕ್ಕೆ ನೀಡುವುದರಲ್ಲಿ ಸಹರ್ಷವಿದ್ದರೆ ಅವರು ಮಾಡುವ ಮಾಟದಲ್ಲೇ ಅಪೂರ್ವ ಆನಂದವನ್ನು ಅನುಭವಿಸುವರು. ಅದುವೇ ಲಿಂಗದೇವನ ಕೂಟವಾಗುತ್ತದೆ. ಹಾಗಲ್ಲದೆ ಒತ್ತಡಕ್ಕೊಳಗಾಗಿ ಉಪಚಾರಕ್ಕಾಗಿ ಮಾಡಿದರೆ ಆ ಕ್ರಿಯೆ ಫಲ ಕೊಡದು; ಸಮಯ ಮತ್ತು ಹಣ ಎರಡೂ ವ್ಯರ್ಥವಾಗುವುವು.

238. ಮಾಡಿದೆನೆಂಬ ಹಮ್ಮು ಬೇಡ.

ಮಾಡಿದೆನೆಂಬುದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡಂಗುರ
ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ
ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ,
ಬೇಡಿತ್ತ ನೀವ ನಮ್ಮ ಲಿಂಗದೇವ - ಬ.ವ.ದೀ.236

ಒಬ್ಬ ವ್ಯಕ್ತಿ ನಿಜಕ್ಕೂ ದಾನಿ, ಉದಾರ ಮನಸ್ಸಿನವ, ಪರೋಪಕಾರಿ. ಆದರೆ ಅವನು ತನ್ನ ಉಪಕಾರಕ್ಕಾಗಿ, ಔದಾರ್ಯಕ್ಕಾಗಿ ಬಹಳಷ್ಟು ಕೀರ್ತಿಯನ್ನು, ಪ್ರಚಾರವನ್ನು, ಮಾಡಿಸಿಕೊಂಡವರಿಂದ ಮಿತಿಮೀರಿದ ಕೃತಜ್ಞತೆಯನ್ನು ಬಯಸುತ್ತಾನೆ. ಅವನ ಮನಸ್ಸಿನಲ್ಲಿ ಪ್ರತಿಯೊಂದು ಕಾರ್ಯಕ್ಕೂ ಜನರು ಹೊಗಳಬೇಕು ಎಂಬ ನಿರೀಕ್ಷೆ ಇರುತ್ತದೆ. ಇದು ಶುದ್ಧಾಂಗವಾಗಿ ತಪ್ಪು, ನಾನು ಮಾಡಿದೆ, ನಾನು ನೀಡಿದೆ ಎಂಬ ಹಮ್ಮು ಏತಕ್ಕೆ? ತಾನೀಶನೀಯದೆ ಮಾನೀಶ ನೀವನೆ? ಎಂಬಂತೆ ಆ ದೇವನು ಸಂಪತ್ತನ್ನು ಕೊಡದಿದ್ದರೆ ಈ ಮಾನವನು ಹೇಗೆ ದಾನ ಧರ್ಮ ಮಾಡಲು ಸಾಧ್ಯ?

ಒಂದು ಊರಿನಲ್ಲಿ ಒಬ್ಬ ದಾನಿ ಇದ್ದನಂತೆ. ಅವನು ಸದಾ ತಲೆಯನ್ನು ತಗ್ಗಿಸಿ ದಾನ ಪಡೆಯುವವರ ಮುಖ ನೋಡದೆ ದಾನ ಮಾಡುತ್ತಿದ್ದನಂತೆ. ಆಗ ಯಾರೋ ಕಾರಣ ಕೇಳಿದಾಗ ಹೇಳಿದನಂತೆ, "ನಿಜವಾದ ದಾನಿ ಪರಮಾತ್ಮ. ಜನರು ನನ್ನನ್ನು ದಾನಿ ಎಂದು ಹೊಗಳುವುದನ್ನು

ಕೇಳಿದಾಗ ನನಗೆ ನಾಚಿಕೆಯಾಗುತ್ತದೆ. ಆ ಮಹಾದಾನಿ ಕೊಡದಿದ್ದರೆ ನಾನೆಂತು ಕೊಡಲು ಸಾಧ್ಯ? ನಾನು ಯಾರಿಗೆ ಕೊಡುತ್ತೇನೆಂಬುದು ತಿಳಿಯಬಾರದು. ಅವರ ಮುಖದ ಗುರುತು ಇದ್ದರೆ ನಾನು ಅವರಿಂದ ಕೃತಜ್ಞತೆಯನ್ನು, ಮರು ಉಪಕಾರವನ್ನು ನಿರೀಕ್ಷಿಸುವ ಸಾಧ್ಯತೆ ಇದೆ.'' ಇದು ದಾಸೋಹಂಭಾವದ ಪರಾಕಾಷ್ಠೆ. ಪ್ರಚಾರ ಪ್ರಿಯ ದಾನಿಯನ್ನು ಲಿಂಗದೇವನ ಪರೀಕ್ಷೆ ಬೆನ್ನು ಹತ್ತಿ ಕಾಡುತ್ತದೆ. ಆದ್ದರಿಂದ ''ಲಿಂಗಕ್ಕೆ, ಜಂಗಮಕ್ಕೆ ನಾನು ಮಾಡಿದೆ ಎಂದು ಹೇಳಿಕೊಳ್ಳಬೇಡ'' ಎಂದು ಧರ್ಮಗುರು ಬಸವಣ್ಣನವರು ಬೋಧಿಸುತ್ತಾರೆ.

ಲಿಂಗಕ್ಕೆ ಅರ್ಚನೆ ಮಾಡುವುದು ಉಪಕಾರವಲ್ಲ; ಅದು ನಮ್ಮ ಕರ್ತವ್ಯ. ಬಾಡಿಗೆ ಮನೆಯಲ್ಲಿ ಇದ್ದ ಮೇಲೆ ಮನೆಯ ಬಾಡಿಗೆ ಕೊಡಬೇಕಲ್ಲವೆ? ಹಾಗೆ ಲಿಂಗದೇವನು ಒಡೆಯನಾಗಿರುವ ಈ ಮರ್ತ್ಯಲೋಕದ ಮಹಾಮನೆಯಲ್ಲಿ ನಾವು ಇದ್ದ ಮೇಲೆ ದೇವನಿಗೆ ಕೊಡುವ ಬಾಡಿಗೆ - ಇಷ್ಟಲಿಂಗಾರ್ಚನೆ ಮತ್ತು ಜಂಗಮ ದಾಸೋಹ. ಅಂದಾಗ ಲಿಂಗಕ್ಕೆ ಮಾಡಿದೆ, ಜಂಗಮ(ಸಮಾಜ)ಕ್ಕೆ ಮಾಡಿದೆ ಎಂದು ಹಮ್ಮಿನಿಂದ ಹೇಳಿಕೊಳ್ಳುವುದರಲ್ಲಿ ಅರ್ಥವೇನಿದೆ ?

ನಾನು ಮಾಡುತ್ತಲಿದ್ದೇನೆ ಎಂಬ ಹಮ್ಮು ಸ್ವಲ್ಪವೂ ಇಲ್ಲದೆ, ''ದೇವನು ಎಂಥಾ ಅವಕಾಶವನ್ನು ನನಗೆ ಒದಗಿಸಿ ಕೊಟ್ಟಿದ್ದಾನೆ. ನನ್ನಿಂದ ಪೂಜೆಗೊಳ್ಳಲಿಕ್ಕೆ ಇಷ್ಟಲಿಂಗವಾಗಿ ಕೈಗೆ ಬಂದಿದ್ದಾನೆ. ಧನ ದಾಸೋಹ ಪಡೆದುಕೊಳ್ಳಲು ಜಂಗಮನಾಗಿ ನಿಂತಿದ್ದಾನೆ. ಈ ಸದವಕಾಶ ಕಲ್ಪಿಸದೆ ಇದ್ದರೆ ನಾನೆಂತು ದಾಸೋಹ ಮಾಡಲು ಸಾಧ್ಯ. ಅದಕ್ಕಾಗಿ ಲಿಂಗದೇವನಿಗೆ ಕೃತಜ್ಞನಾಗಿದ್ದೇನೆ.'' ಎಂಬ ವಿನಯಭಾವ ಬಲಿದರೆ ಆಗ ಲಿಂಗದೇವನು ಇನ್ನಷ್ಟು ಮತ್ತಷ್ಟು ಸಂಪತ್ತು ಮತ್ತು ಅನುಗ್ರಹ ನೀಡುವನು.

239. ದೇವನೊಲುಮೆಯ ಸಪ್ತ ಸೂತ್ರಗಳು

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಲಿಂಗದೇವರನೊಲಿಸುವ ಪರಿ. - ಬ.ವ.ದೀ.237

ಧರ್ಮಪಿತ ಬಸವಣ್ಣನವರ ವಚನಗಳಲ್ಲಿ ಅತೀವ ಜನಪ್ರಿಯವಾದುದು ಮತ್ತು ವಿಶ್ವಸಂದೇಶವನ್ನು ಒಳಗೊಂಡುದು ಈ ವಚನ.

ಕಳಬೇಡ: ಮನುಷ್ಯ ಇನ್ನೊಬ್ಬರ ವಸ್ತುವನ್ನು, ತನ್ನದಲ್ಲದ್ದನ್ನು ಅಪಹರಿಸುವುದು ಕಳವು ಮಾಡಿದಂತೆ. ಕಳ್ಳತನದ ವ್ಯಾಪ್ತಿ ಬಹುದೊಡ್ಡದು. ಪರಧನ, ಪರಸ್ತ್ರೀ - ಇವುಗಳನ್ನು ಕಳ್ಳತನದ ವ್ಯಾಪ್ತಿಯು ಒಳಗೊಳ್ಳುತ್ತದೆ. ತನ್ನದೇಹಕ್ಕೆ ಅವಶ್ಯವಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತಿನ್ನುವುದು ಕಳ್ಳತನವೆ. ತನ್ನ ಅವಶ್ಯಕತೆಗಿಂತ ಮಿತಿ ಮೀರಿ ಸಂಪತ್ತನ್ನು ಸಂಗ್ರಹಿಸುವುದೂ ಕಳ್ಳತನವೆ. ಪರಸ್ತ್ರೀಯನ್ನು ಕದ್ದು ನೋಡುವುದು ಕಣ್ಣು ಮಾಡುವ ಕಳ್ಳತನವೆ. ಯಾರಾದರಿಬ್ಬರು ತಮ್ಮ ವೈಯಕ್ತಿಕ ವಿಷಯ ಮಾತನಾಡುವಾಗ ಕದ್ದು ಕೇಳುವುದು ಕಿವಿ ಮಾಡು ಕಳ್ಳತನ. ವೈದ್ಯರು ಪಥ್ಯವನ್ನು ಹೇಳಿದ್ದರೂ ನಾಲಿಗೆಯ ಚಪಲವನ್ನು ನಿಗ್ರಹಿಸಲಾರದೆ ಅಪಥ್ಯವಾದುದನ್ನು ತಿನ್ನುವುದು ನಾಲಿಗೆ ಮಾಡುವ ಕಳ್ಳತನ. ಸಾಮಾನ್ಯವಾಗಿ ಎಲ್ಲ ಇಂದ್ರಿಯಗಳು ಒಂದೊಂದೇ ಕೆಲಸವನ್ನು ನಿರ್ವಹಿಸುತ್ತವೆ. ಉದಾ: ಕಿವಿ ಕೇಳುತ್ತದೆ, ಮೂಗು ವಾಸನೆ ನೋಡುತ್ತದೆ. ಆದರೆ ನಾಲಿಗೆ ಮತ್ತು ಗುಹ್ಯೇಂದ್ರಿಯ ಮಾತ್ರ ಎರಡೆರಡು ಕೆಲಸಗಳನ್ನು ನಿರ್ವಹಿಸುತ್ತವೆ. ನಾಲಿಗೆಯ ಒಂದು ಕೆಲಸ ರುಚಿ ನೋಡುವುದು ಇನ್ನೊಂದು ಮಾತನಾಡುವುದು. ಅಪಥ್ಯವಾದುದನ್ನು ತಿನ್ನುವುದು ಅಗತ್ಯಕ್ಕಿಂತಲೂ ಹೆಚ್ಚು ತಿನ್ನುವುದು ಕಳ್ಳತನವಾದಂತೆ ಬೆನ್ನ ಹಿಂದೆ ಆಡಿಕೊಳ್ಳುವುದು ಸಹ ನಾಲಿಗೆ ಮಾಡುವ ಕಳ್ಳತನವೆ! ಇಂಥ ಎಲ್ಲ ಕಳ್ಳತನಗಳಿಂದ ದೂರವಿರಬೇಕು.

ಕೊಲಬೇಡ: ಕೊಲ್ಲುವಿಕೆ ಎಂದರೆ ಇನ್ನೊಂದು ಜೀವವನ್ನು ಹತ್ಯೆ ಮಾಡುವುದು; ಇನ್ನೊಂದು

ಜೀವಿಯ ಬದುಕುವಿಕೆಯ ಹಕ್ಕನ್ನು ಕಿತ್ತುಕೊಳ್ಳುವುದು. ಈ ಹಿಂಸೆಯು ಕೇವಲ ಹತ್ಯೆ ಮಾಡುವುದಕ್ಕಷ್ಟೇ ಸೀಮಿತವಾಗಿರದು. ಕೈಯಿಂದ ಹಿಂಸೆ ಮಾಡುವುದು ಹೊಡಿ, ಬಡಿ, ಕೊಲ್ಲು ಎಂಬುದರಲ್ಲಿ ವ್ಯಕ್ತವಾದರೆ ನಾಲಿಗೆ ಮಾಡುವ ಹಿಂಸೆ ಬೈಯ್ಗುಳ, ಚುಚ್ಚು, ವ್ಯಂಗ್ಯ ಮಾತುಗಳಲ್ಲಿ ಅಭಿವ್ಯಕ್ತಗೊಳ್ಳುವುದು. ಇದಕ್ಕಿಂತಲೂ ಸೂಕ್ಷ್ಮ ಮನಸ್ಸು ಪ್ರಯೋಗಿಸುವ ಹಿಂಸೆ, ಮನಸ್ಸಿನಲ್ಲಿಯೇ ಶಪಿಸುವುದು, ಕೆಟ್ಟದ್ದು ಬಯಸುವುದು ಮನಸ್ಸು ಮಾಡುವ ಹಿಂಸೆ. ಯಾವುದೇ ಇಂದ್ರಿಯದಿಂದಲೂ ಹಿಂಸೆಯನ್ನು ಮಾಡಬಾರದು.

ಅಹಿಂಸೆಯ ಒಂದು ಅಂಗ ಸಸ್ಯಾಹಾರ, ಮಾಂಸಾಹಾರ ಮಾಡದಿರುವಿಕೆ. ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಆ ಹಕ್ಕನ್ನು ಮನುಷ್ಯ ಕಿತ್ತುಕೊಳ್ಳಬಾರದೆಂದೇ ದೇವನು ದವಸ - ಧಾನ್ಯಗಳನ್ನು, ಹಣ್ಣು - ಕಾಯಿಪಲ್ಲೆಗಳನ್ನು ಸೃಷ್ಟಿ ಮಾಡಿದ್ದಾನೆ. ತನ್ನ ನಾಲಿಗೆಯ ಚಪಲಕ್ಕಾಗಿ ವ್ಯಕ್ತಿಯು ಇನ್ನೊಂದು ಪ್ರಾಣಿಯನ್ನು ಕೊಂದು ತಿನ್ನಬಾರದು.

ಹುಸಿಯ ನುಡಿಯಲು ಬೇಡ : ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಸುಳ್ಳು ಹೇಳುವನು. ಇನ್ನೊಬ್ಬರ ತೇಜೋವಧೆ ಮಾಡಲು ಸುಳ್ಳನ್ನು ಹೆಣೆಯುವನು. ನಾಲಿಗೆಯ ಚಪಲಕ್ಕಾಗಿ ಮಾಂಸಾಹಾರ ಮಾಡುವುದರಿಂದ ವೈಯಕ್ತಿಕ ಪಾಪ (Individual sin) ಬಂದರೆ ಅದೇ ನಾಲಿಗೆಯಿಂದ ಸುಳ್ಳು ಹೇಳುವುದರಿಂದ ಇನ್ನೊಬ್ಬರ ಬದುಕು ಹಾಳಾಗಿ ಸಾಮಾಜಿಕ ಪಾಪ (Social sin) ಘಟಿಸುವುದು. ಕೇವಲ ವಿಶೇಷ ಪ್ರಸಂಗದಲ್ಲಿ, ಏನಾದರೂ ಉಪಕಾರವನ್ನು ಮಾಡಬೇಕಾದ ಜವಾಬ್ದಾರಿಯಿಂದ ಸುಳ್ಳು ಹೇಳಬೇಕಾಗಿ ಬಂದರೆ ಅದು ಕ್ಷಮ್ಯವಾಗುವುದು. ಉದಾ: ರೋಗಿಯೊಬ್ಬರಿಗೆ ಮಾರಣಾಂತಿಕ ಕಾಯಿಲೆ ಬಂದಿರುತ್ತದೆ ಎಂದುಕೊಳ್ಳೋಣ. ಆಗ ವೈದ್ಯರು ಅದನ್ನು ನೇರವಾಗಿ ಹೇಳದೆ ರೋಗಿಗೆ 'ನಿಮಗೆ ಏನೂ ಕಾಯಿಲೆ ಇಲ್ಲ' ಎಂದೇ ಹೇಳುತ್ತಿರುವರು. ಇದು ಸುಳ್ಳು ಅನ್ನಿಸಿಕೊಳ್ಳದೆ ಮಾನವೀಯತೆಯಾಗುವುದು.

ಮುನಿಯಬೇಡ : ಮನುಷ್ಯನನ್ನು ಅಪರಾಧಿಯನ್ನಾಗಿ ಮಾಡುವುದು ಕದಿಯುವಿಕೆ, ಕೊಲ್ಲುವಿಕೆ, ವಂಚನೆ ಮಾತ್ರವಲ್ಲ ಕೋಪ ಎಂಬ ಮನೋವ್ಯಾಪಾರ. ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಡುವವನು ವಿವೇಚನಾಶಕ್ತಿ ಕಳೆದುಕೊಳ್ಳುವನು. ಕೋಪವು ತಲೆಗೇರಿದಾಗ ವ್ಯಕ್ತಿಯು ಏನು ಮಾಡುತ್ತಾನೆಂದು ಹೇಳಲು ಸಾಧ್ಯವಿಲ್ಲ. ಒಂದನೆಯದಾಗಿ ಕೋಪವು ಶರೀರದ ಮೇಲೆ ಪರಿಣಾಮ ಬೀರಿ ರಕ್ತದೊತ್ತಡವನ್ನು ಹೆಚ್ಚಿಸುತ್ತದೆ, ಹೃದಯದ ಮೇಲೆ ಪರಿಣಾಮವನ್ನು ಬೀರುತ್ತದೆ; ಮನಸ್ಸಿನ ಮೇಲೆ ಪ್ರಭಾವ ಬೀರಿ ವಿವೇಕ ಶಕ್ತಿಯನ್ನು ಕುಂದಿಸುತ್ತದೆ. ಆದ್ದರಿಂದ ಶಾಂತವಾದ ಮನಃಸ್ಥಿತಿಯನ್ನು ಹೊಂದುವುದು ಸಾಧಕನ ಮೊದಲ ಲಕ್ಷಣ.

ಅನ್ಯರಿಗೆ ಅಸಹ್ಯ ಪಡಬೇಡ : ತನಗಿಂತ ಯಾವುದಾದರೂ ರೀತಿಯಲ್ಲಿ ಕೆಳಗೆ ಇರುವವರನ್ನು ಕಂಡರೆ ಕೆಲವರು ಅಸಹ್ಯ ಪಡುವುದುಂಟು. ಜಾತಿಯಲ್ಲಿರಬಹುದು, ಉದ್ಯೋಗದಲ್ಲಿರಬಹುದು, ಅಂತಸ್ತಿನಲ್ಲಿರಬಹುದು. ವಿದ್ಯೆಯಲ್ಲಿರಬಹುದು, ಶ್ರೀಮಂತಿಕೆಯಲ್ಲಿರಬಹುದು, ಮೈ ಬಣ್ಣದಲ್ಲಿರಬಹುದು. ವಿವೇಕಿಯಾದವನು ತನಗಿಂತ ಕೆಳಗೆ ಇರುವವರನ್ನು ಕಂಡಾಗ ಅನುಕಂಪ ಹೊಂದುವನೇ ವಿನಾ ಅಸಹ್ಯ ಪಡುವುದಿಲ್ಲ. ಅಜ್ಞಾನಿಗಳಷ್ಟೇ ಕೆಳಮಟ್ಟದಲ್ಲಿರುವ ಇತರರನ್ನು ಕಂಡಾಗ ತಿರಸ್ಕಾರದಿಂದ ನೋಡುವುದು. ಅನುಕಂಪವಿದ್ದಾಗ ಅವರ ಕಷ್ಟ ಪರಿಹರಿಸಲು ವ್ಯಕ್ತಿ ಪ್ರಯತ್ನಿಸುವನು. ತಿರಸ್ಕಾರವಿದ್ದಾಗ ಅವರನ್ನು ದೂರವಿಡುವನು.

ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ : ಮನುಷ್ಯ ದೌರ್ಬಲ್ಯಗಳಲ್ಲಿ ಒಂದು ಮುಖ್ಯವಾದ ದೌರ್ಬಲ್ಯವೆಂದರೆ ತನ್ನನ್ನು ತಾನು ಬಣ್ಣಿಸಿಕೊಳ್ಳುವುದು ಇತರರನ್ನು ಹಳಿಯುವುದು. ಏನಾದರೂ ಉತ್ತಮ ಕಾರ್ಯವಾದರೆ ತನ್ನಿಂದಲೇ ಅದು ಆಯಿತೆಂದು ಬೇರಾರೂ ಅದಕ್ಕೆ ಪ್ರಯತ್ನಿಸಲಿಲ್ಲವೆಂದು ಹೇಳಿಕೊಳ್ಳುವನು. ಇದಿರ ಹಳಿಯಲು ಬೇಡ ಎಂಬ ವಾಕ್ಯದಲ್ಲಿ ಇದಿರ ಎಂದು ಒಂದು ಪಾಠಾಂತರದಲ್ಲಿ ಇತರ ಎಂದು ಮತ್ತೆ ಕೆಲವು ಪಾಠಾಂತರದಲ್ಲಿ ಇದೆ. ಇತರ ಎಂದರೆ ಇನ್ನಿತರರನ್ನು ಹಳಿಯಬೇಡ ಎಂದಾಗುತ್ತದೆ. 'ಇದಿರ' ಎಂದರೆ ಎದುರಿಗೇ ಹಳಿಯಬೇಡ ಎಂದಾಗುತ್ತದೆ. ಎದುರು ಹಳಿಯದೆ ಬೆನ್ನ ಹಿಂದೆ ಆಡಿಕೊಳ್ಳಬೇಕು ಎಂದು ಅರ್ಥವೆ? ಇಲ್ಲ, ''ವ್ಯಕ್ತಿಯನ್ನು ಇನ್ನಿತರ ಜನರ

ಎದುರಿಗೆ ಹಳಿಯಬೇಡ' ಎಂದು ಅರ್ಥ. ಒಬ್ಬ ವ್ಯಕ್ತಿ ತಪ್ಪುತ್ತಿದ್ದರೆ ಅವನ ತಪ್ಪನ್ನು ಅನೇಕರ ಎದುರಲ್ಲಿ ಆಡಿ ತೋರಿಸಬಾರದು. ಅದರಿಂದ ಅವನಿಗೆ ಅವಮಾನವಾದಂತಾಗಿ ತನ್ನ ತಪ್ಪು ಎಲ್ಲರಿಗೂ ತಿಳಿಯಿತು ಎಂದು ಇನ್ನಷ್ಟು ಭಂಡನಾಗಿ ವರ್ತಿಸಬಹುದು. ಒಬ್ಬನನ್ನೇ ಕೂರಿಸಿಕೊಂಡು ಕಳಕಳಿ -ಯಿಂದ ಬುದ್ಧಿ ಹೇಳಿದಾಗ ವ್ಯಕ್ತಿಯು ತಿದ್ದಿಕೊಳ್ಳುವ ಸಾಧ್ಯತೆ ಹೆಚ್ಚಿರುವುದು.

ಈ ಏಳು ಮಹಾಪಾತಕಗಳನ್ನು ಮಾಡದೆ ಇದ್ದರೆ ಮಾನವ ಸಮಾಜ ಬಹು ಸುಂದರವಾಗಿರುವುದು. ಇದರಿಂದ ವ್ಯಕ್ತಿಯ ಅಂತರಂಗವು ಶುದ್ಧೀಕರಣಗೊಳ್ಳುವುದು, ಅರಿವು ನೆಲೆಸುವುದು ಬಹಿರಂಗ ಶುದ್ಧೀಕರಣಗೊಂಡು ಆಚಾರವು ನೆಲೆಸುವುದು. ಅರಿವು - ಆಚಾರಗಳ ಸಂಗದಿಂದ ಅನುಭಾವವು ಪ್ರಾಪ್ತಿಯಾಗುವುದು. ಇದರ ಪರಿಣಾಮವಾಗಿ ಲಿಂಗದೇವನ ಒಲುಮೆ ಪ್ರಾಪ್ತಿಯಾಗುವುದು. ಈ ವಚನದ ಶೈಲಿ ವಿಶೇಷವಾಗಿದೆ. ಏನು ಮಾಡಬೇಕೆಂದು ಗುರು ಬಸವಣ್ಣನವರು ಹೇಳದೆ ಏನು ಮಾಡಬಾರದು ಎಂಬುದನ್ನು ಮಾತ್ರ ಇಲ್ಲಿ ಹೇಳುತ್ತಾ ಹೋಗಿದ್ದಾರೆ. ಪಾಪ ಕರ್ಮಗಳಿಗೆ ಕಾರಣವಾಗುವ ಈ ದುರ್ವೃತ್ತಿಗಳನ್ನು ತೊರೆದುದೇ ಆದರೆ ಅಲ್ಲಿ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ಸಹಜ ಸಿದ್ಧಿಯಾಗುವವು. ಕಸವನ್ನೇ ಕೆಡವದಿದ್ದರೆ ಗುಡಿಸುವ ಪ್ರಮೇಯವೆಲ್ಲಿ ಬರುತ್ತದೆ?

240. ನಡೆ-ನುಡಿ ಉತ್ತಮವಾಗಿರಲಿ

ಕೆಡೆ ನಡೆಯದೆ ಕೆಡೆ ನುಡಿಯದೆ ಅನ್ಯರ ಪ್ರತಿಪಾದಿಸದಿದ್ದಡೆ
ಏನ ಮಾಡನಯ್ಯಾ ಲಿಂಗವು, ಏನ ಕೊಡನಯ್ಯಾ ಲಿಂಗವು?
ತಾನು ಏನ ಬೇಡಿದುದನೀವನಾಗಿ ನಂಬುಗೆಯುಳ್ಳ ಭಕ್ತರಿಗೆ
ಇದೇ ದಿಬ್ಯ, ಲಿಂಗದೇವಾ. - ಬ.ವ.ದೀ.238

ಕೆಟ್ಟದಾದ ನಡೆ, ಕೆಟ್ಟದಾದ ನುಡಿ ಇಲ್ಲದಿದ್ದರೆ ವ್ಯಕ್ತಿಯಿಂದ ಬಹುದೊಡ್ಡ ಉಪಕಾರವಾಗುವುದು. ಕೆಟ್ಟ ಚಾರಿತ್ರ್ಯದಿಂದ, ವೃತ್ತಿಯಿಂದ ವ್ಯಕ್ತಿ ಬಹಳಷ್ಟು ಕೆಡುಕನ್ನು ಉಂಟು ಮಾಡುವನು. ಇವನು ಮಾಡುವ ಕುಕರ್ಮಗಳಿಂದ ಬೇರೆಯವರ ಜೀವನದಲ್ಲೂ ಅಳಿಸಲಾರದ ನೋವು ಉಂಟಾಗುವ ಸಾಧ್ಯತೆ ಇದೆ.

ಒಂದು ಊರಿನಲ್ಲಿ ಸಜ್ಜನನಾದ ಓರ್ವ ತಂದೆ ಇದ್ದ. ಅವನ ಮಗ ಬಹಳ ಕೆಟ್ಟ ಸ್ವಭಾವದವನಾದ. ಯಾರು ಬುದ್ಧಿ ಹೇಳಿದರೂ ತಿದ್ದಿಕೊಳ್ಳಲಿಲ್ಲ. ಇಡೀ ಊರಿನ ಜನರು ಬಂದು ಅವನ ಬಗ್ಗೆ ಅವನಿಂದ ತಮಗೆ ಏನು ಕೆಡುಕಾಯಿತು ಎಂಬ ಬಗ್ಗೆ ದೂರು ಹೇಳುತ್ತಿದ್ದರು. ಇದರಿಂದ ತಂದೆ ಬಹಳ ನೊಂದುಕೊಂಡ. ಅವನು ಒಂದು ಆಲೋಚನೆ ಮಾಡಿದ. ಅವರ ಮನೆಯ ಪಡಸಾಲೆಯಲ್ಲಿ ವಿಶಾಲವಾದ ಗೋಡೆಯಿತ್ತು. ಯಾರಾದರೊಬ್ಬರು ಬಂದು ದೂರು ಹೇಳಿದತಕ್ಷಣ ಒಂದು ಮೊಳೆಯನ್ನು ಆ ಗೋಡೆಗೆ ಹೊಡೆಯುತ್ತಲಿದ್ದ. ಒಂದು ದಿವಸ ಆ ಗೋಡೆಯೆಲ್ಲ ತುಂಬಿತು. ಮಗ ನೋಡಿ ಕೇಳಿದ. "ಇವು ನೀನು ಮಾಡಿದ ಅಪರಾಧಗಳ ಸಂಖ್ಯೆ" ಎಂದು ತಂದೆ ಹೇಳಿದ. ಆಗ ಮಗನಿಗೆ ತುಂಬಾ ಪಶ್ಚಾತ್ತಾಪವಾಯಿತು. ಮನಸ್ಸಿಗೆ ಕೆಡುಕೆನಿಸಿ ಅವನು ಪರಿವರ್ತನೆಗೊಂಡ. ನಂತರ ಒಳ್ಳೆಯ ಕೆಲಸಗಳನ್ನು ಮಾಡಲು ತೊಡಗಿದ. ಜನರು ಬಂದು ಮಗ ಮಾಡುತ್ತಿದ್ದ ಉತ್ತಮ ಕೆಲಸ, ಸಹಾಯ, ಉಪಕಾರದ ಬಗ್ಗೆ ಹೇಳತೊಡಗಿದರು. ಒಬ್ಬರು ಒಂದು ವಿಷಯ ಹೇಳುತ್ತಲೇ ತಂದೆ ಒಂದು ಮೊಳೆಯನ್ನು ಕಿತ್ತು ಹಾಕತೊಡಗಿದ. ಇದರಿಂದ ಉತ್ತೇಜಿತನಾದ ಮಗ ಬಹಳಷ್ಟು ಪರೋಪಕಾರವನ್ನು ಮಾಡತೊಡಗಿದ. ಒಂದು ದಿವಸ ಎಲ್ಲ ಮೊಳೆಗಳು ಕೀಳಲ್ಪಟ್ಟಾಗ ಮಗನಿಗೆ ಬಹು ಸಂತೋಷವಾಯಿತು. ತಂದೆಯೂ ಮಗನನ್ನು ಅಭಿನಂದಿಸಿದ. ಆದರೆ ಮಗ ವಿಷಾದದಿಂದ ನುಡಿದ, "ಅಪ್ಪಾ, ಮೊಳೆಗಳೇನೋ ಕೀಳಲ್ಪಟ್ಟವು. ಆದರೆ ಗೋಡೆ ಮೇಲಿನ ಕಲೆಗಳು ಹಾಗೆಯೇ ಉಳಿದಂತೆ ನನ್ನಿಂದ ತೊಂದರೆಗೆ ಒಳಗಾದವರ ಜೀವನದಲ್ಲಿ ಮಾಯಲಾರದ ನೋವು ಉಳಿದಿರುವ ಸಾಧ್ಯತೆ ಇದೆಯಲ್ಲವೆ?"

ತಪ್ಪು ಮಾಡುವವನು ತಾನು ತಿದ್ದಿಕೊಂಡರೂ ಅವನಿಂದ ಸಂಕಷ್ಟಕ್ಕೆ ಒಳಗಾದವರು ಬಹಳ ನೋವು ಜೀವನ ಪರ್ಯಂತರ ಅನುಭವಿಸಬೇಕಲ್ಲವೆ? ಅದಕ್ಕಾಗಿ ವ್ಯಕ್ತಿ ಕೆಟ್ಟ ನಡೆಯನ್ನು ರೂಢಿಸಿಕೊಳ್ಳದಿರುವದು ಒಳಿತಲ್ಲವೆ?

ಒಬ್ಬ ವ್ಯಕ್ತಿಯ ನಡೆ ಚೆನ್ನಾಗಿದ್ದರೂ ನುಡಿ ಚೆನ್ನಾಗಿಲ್ಲದಿದ್ದರೆ ಅವನಿಂದ ಬಹಳಷ್ಟು ಕೆಡುಕಾಗುವುದು. ಒರಟು ಮಾತು, ಚುಚ್ಚು ನುಡಿ, ವ್ಯಂಗ್ಯ ನುಡಿ, ನಿಂದೆ-ಇತ್ಯಾದಿಗಳಿಂದ ಇತರರಿಗೆ ಬಹಳ ನೋವಾಗುವುದು. ಕತ್ತಿಯ ಮೊನೆ ಮಾಡುವ ಗಾಯಕ್ಕಿಂತಲೂ ನಾಲಿಗೆಯಿಂದ ಆಡುವ ಚುಚ್ಚು ಮಾತು ಹೆಚ್ಚು ನೋವನ್ನುಂಟು ಮಾಡುವುದು.

ಕೆಟ್ಟದಾದ ವರ್ತನೆ ಹೊಂದಿರದಿರುವುದು, ಕೆಟ್ಟದಾದ ಮಾತುಗಳನ್ನು ಆಡದಿರುವುದು, ಅನ್ಯರಿಗೆ ಬುದ್ಧಿ ಹೇಳದಿರುವುದು ಶರಣನ ಲಕ್ಷಣ. ಕೆಲವರು ತಮ್ಮ ವರ್ತನೆಯನ್ನು ಅಂತರವಲೋಕನ ಮಾಡಿಕೊಳ್ಳದೆ ಇನ್ನೊಬ್ಬರಲ್ಲಿ ಇರುವ ತಪ್ಪುಗಳನ್ನು ಎತ್ತಿ ತೋರಿಸಿ, ಅವರಿಗೆ ಬುದ್ಧಿ ಹೇಳುವ ಕೆಲಸವನ್ನು ಮಾಡುತ್ತಾರೆ. ಹೀಗೆ ಮಾಡದೆ ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳುತ್ತ ಹೋದರೆ ಲಿಂಗದೇವನು ಏನು ಮಾಡನು, ಏನು ಕೊಡದೆ ಇರನು? ಎಲ್ಲವನ್ನು ಅನುಗ್ರಹಿಸುವನು. ಭಕ್ತನು ಏನು ಬೇಡಿದರೂ ದೇವನು ಕೊಟ್ಟು ಬಿಡುವನು; ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಭಕ್ತನು ಏನನ್ನೂ ಬೇಡದಿದ್ದರೂ ಅವನ ಅಗತ್ಯವನ್ನು ಅರಿತು ತಾನೇ ಒದಗಿಸಿ ಬಿಡುವನು. ಆದ್ದರಿಂದ ಲಿಂಗದೇವನಲ್ಲಿ ಅನನ್ಯವಾದ ನಂಬಿಕೆ ಇರುವ ಸದ್ಭಕ್ತನು. ಇದೇ ದಿವ್ಯ ನಡೆ ಎಂದು ಭಾವಿಸಿ ಒಳ್ಳೆಯ ನಡೆ -ನುಡಿಗಳನ್ನು ರೂಢಿಸಿಕೊಳ್ಳಬೇಕು.

ಈ ಜಗತ್ತಿನಲ್ಲಿ ಸತ್ಯವಾದಿಗಳು, ಸಜ್ಜನರು ಬಹಳ ಕಷ್ಟಪಡುವರು. ದುರ್ಜನರು, ದುರಾಗ್ರಹಿಗಳು ಅಟ್ಟಹಾಸದಿಂದ ಶ್ರೀಮಂತಿಕೆಯಿಂದ ಮೆರೆಯುವರು. ಆಗ ಕೆಲವೊಮ್ಮೆ ಸಾತ್ವಿಕರು ಖಿನ್ನರಾಗಿ ನಿರುತ್ಸಾಹಿತರಾಗಬಾರದು. ದೇವನಲ್ಲಿ ನಂಬಿಕೆ ಇದ್ದರೆ ಇದೇ ದಿವ್ಯಪಥ ಎಂದು ದೃಢವಾಗಿ ನಂಬಿ ಮುನ್ನಡೆಯಬೇಕು.

241. ಸ್ವಾಮಿ - ಭೃತ್ಯ ಸಂಬಂಧ

ಸ್ವಾಮಿ ಭೃತ್ಯ ಸಂಬಂಧಕ್ಕೆ ಆವುದು ಪಥವೆಂದಡೆ,
ದಿಟವ ನುಡಿವುದು, ನುಡಿದಂತೆ ನಡೆವುದು.
ನುಡಿದುಹುಸಿವ, ನಡೆದು ತಪ್ಪುವ
ಪ್ರಪಂಚಿಯನೊಲ್ಲ ಲಿಂಗದೇವ - ಬ.ವ.ದೀ.239

ಮಾನವರ ಮಧ್ಯೆ ಸಂಬಂಧಗಳು ಏರ್ಪಡುತ್ತವೆ. ಗುರು-ಶಿಷ್ಯ, ಪತಿ-ಪತ್ನಿ, ಸ್ನೇಹಿತರು, ತಂದೆ -ಮಕ್ಕಳು, ಒಡೆಯ - ಸೇವಕ; ಹೀಗೆ ಸಂಬಂಧಗಳು ಇರುತ್ತವೆ. ಪರಸ್ಪರ ಅವಿಶ್ವಾಸ ಮಾಡುವುದರಿಂದ, ಸುಳ್ಳು ಹೇಳುವುದರಿಂದ, ಕೊಟ್ಟ ಮಾತಿಗೆ ತಪ್ಪಿ ನಡೆಯುವುದರಿಂದ ಸಂಬಂಧಗಳು ಹಳಸಿಬಿಡುತ್ತವೆ. ಆದ್ದರಿಂದ ಒಡೆಯ - ಸೇವಕರ ಮಧ್ಯದ ಸಂಬಂಧ ಹೇಗಿರಬೇಕೆಂದರೆ ಸತ್ಯವನ್ನು ನುಡಿಯಬೇಕು; ನುಡಿದಂತೆ ನಡೆಯ ಬೇಕು. ಸುಳ್ಳು ಹೇಳುವುದು, ಮೊದಲು ಮಾತುಕೊಟ್ಟು ನಂತರ ತಾನು ಹಾಗೆ ಹೇಳಿಯೇ ಇಲ್ಲ ಎನ್ನುವುದು, ಪುನಃ ಪುನಃ ತಪ್ಪು ಮಾಡುತ್ತಲೇ ಇರುವುದು ದೇವರು ಮೆಚ್ಚುವಂತಹ ನಡೆಯಲ್ಲ. ಯಾವುದೂ ನಿಯತ್ತು ಇಲ್ಲದ ಪ್ರಾಪಂಚಿಕರ ಇಂಥ ನಡೆ ಲಿಂಗದೇವನಿಗೆ ಖಂಡಿತಾ ಮೆಚ್ಚುಗೆಯಾಗದು.

242. ಸತ್ಯ ಶುದ್ಧ ಗಳಿಕೆ

ಸತ್ಯವುಳ್ಳ ಭಾಂಡವ ತುಂಬುವುದಯ್ಯಾ,
ಸುಯಿಧಾನವಯ್ಯಾ, ಸುಯಿಧಾನವಯ್ಯಾ!
ಮನ ಧಾರೆವಟ್ಟಲು -
ಲಿಂಗದೇವನ ಶರಣರು ಹಿಡಿಯದ ಭಾಂಡವನು
ಆರಾದಡಾಗಲಿ ಹೋಗಲಿಯರಯ್ಯಾ!
ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ - ಬ.ವ.ದೀ.240

ಪ್ರಾಮಾಣಿಕತೆಯಿಂದ ಕೂಡಿದ ಕಾಯಕ ಮಾಡಿ ಸಂಪತ್ತನ್ನು ಸಂಗ್ರಹಿಸಬೇಕು. ವ್ಯಾಪಾರದಲ್ಲಿ ಎರಡು ಬಗೆ. ಅಕ್ಕಿಗೆ ಕಲ್ಲು ಮಿಶ್ರಣ ಮಾಡಿ ಮಾರಾಟ ಮಾಡಿ, ಕಲ್ಲಿಗೆ ಅಕ್ಕಿ ಬೆಲೆಯನ್ನು ಪಡೆದು

ಕೊಂಡು ವ್ಯಕ್ತಿಯು ಶ್ರೀಮಂತನಾಗಬಹುದು. ಹಾಗಲ್ಲದೆ ಒಬ್ಬನು ಪ್ರಾಮಾಣಿಕ ಅಂಗಡಿಕಾರ ಎಂದು ಪ್ರಚಾರವಾದಾಗ ಜನರು ಆವನ ಬಳಿಗೇ ಹೆಚ್ಚು ಬರುವುದರಿಂದ ಆದಾಯ ವೃದ್ಧಿಯಾಗಿ ಶ್ರೀಮಂತ ನಾಗಬಹುದು. ಪ್ರಾಮಾಣಿಕವಾಗಿ ಸಂಪತ್ತು ಗಳಿಸಿದರೆ ಆಗ ವ್ಯಕ್ತಿಗೆ ಸುಯಿಧಾನ - ಒಂದು ಬಗೆಯ ಸಂತೃಪ್ತಿ ಇರುತ್ತದೆ.

ಸ್ಥಾವರ ಲಿಂಗದ ಮೇಲೆ ಧಾರೆವಟ್ಟಲು ಇದ್ದು ಆದರಿಂದ ನೀರು ದಬದಬ ಸುರಿಯದೆ ಹನಿ ಹನಿಯಾಗಿ ಬೀಳುತ್ತದೆ. ಹಾಗೆ ಮನಸ್ಸು ಎಂಬ ಧಾರೆವಟ್ಟಲ ಮೂಲಕ, ಸತ್ಯ ಶುದ್ಧ ಕಾಯಕದಿಂದ ಗಳಿಸಿದ್ದು ದಾಸೋಹದ ಮೂಲಕ ಸಮಾಜಕ್ಕೆ ವಿನಿಯೋಗವಾಗಬೇಕು. ಭಕ್ತನು ಗಳಿಸಿದ ಸಂಪತ್ತನ್ನು ಶರಣರು, ಜಂಗಮರು ಪಡೆದುಕೊಂಡು ಸತ್ಕಾರ್ಯಕ್ಕೆ ಬಳಸುವರು. ಒಂದು ವೇಳೆ ಅನ್ಯಾಯದಿಂದ ಗಳಿಸಿದ್ದು ಆದರೆ ಆದು ಶರಣರಿಗೆ, ಸತ್ಕಾರ್ಯಕ್ಕೆ ಸಲ್ಲದು. ಅದು ಬಳಕೆಗೂ ಸಲ್ಲದೆ ಹೋಗುತ್ತದೆ.

243. ಲೋಕಾದಿಲೋಕಂಗಳಿಲ್ಲ

ದೇವಲೋಕ ಮೃತ್ಯುಲೋಕವೆಂಬುದು ಬೇರಿಲ್ಲ ಕಾಣಭೋ!
ಸತ್ಯವ ನುಡಿವುದೆ ದೇವಲೋಕ; ಮಿಥ್ಯವ ನುಡಿವುದೆ ಮೃತ್ಯುಲೋಕ
ಆಚಾರವೆ ಸ್ವರ್ಗ; ಅನಾಚಾರವೆ ನರಕ-
ಲಿಂಗದೇವಾ, ನೀವೆ ಪ್ರಮಾಣ.

-ಬ.ವ.ದಿ. 241

ಈ ಜಗತ್ತು, ಜೀವನ ದುಃಖಮಯವಾದುದರಿಂದಲೇ ಏನೋ ಮನುಷ್ಯ ಸತ್ತ ನಂತರವಾದರೂ ಸುಖವನ್ನು ಕಾಣಬೇಕೆಂದು ಆಶಿಸಿ ದೇವಲೋಕ, ಸ್ವರ್ಗ ಮುಂತಾದುವನ್ನು ಕಲ್ಪಿಸಿಕೊಂಡ. ಉತ್ತಮರು, ಸಜ್ಜನರು ಕಷ್ಟಪಡುವುದನ್ನು ದುರ್ಜನರು ಅಟ್ಟಹಾಸದಿಂದ ಮೆರೆಯುವುದನ್ನು ಕಂಡು ದುರ್ಜನರು ಈ ಲೋಕದಲ್ಲಿ ಮೆರೆದರೂ ಸತ್ತ ನಂತರ ಮೃತ್ಯು ಲೋಕದಲ್ಲಿ ನರಳುವರು ಎಂದು ಭಾವಿಸಿ ಸಮಾಧಾನ ಪಟ್ಟುಕೊಂಡ. ಇದೊಂದು ಭ್ರಾಂತ ಕಲ್ಪನೆ ಎಂದು ಗುರು ಬಸವಣ್ಣನವರ ಅಭಿಪ್ರಾಯ.

ಅವರ ಪ್ರಕಾರ ದೇವಲೋಕ ಮತ್ತು ಮೃತ್ಯುಲೋಕ ಎಂಬುವವು ಮರ್ತ್ಯಲೋಕ ಬಿಟ್ಟು ಬೇರೆ ಇಲ್ಲ. ಇದೇ ಲೋಕದಲ್ಲೇ ಇವೆರಡೂ ಇವೆ. ಸತ್ಯವ ನುಡಿದು ಸದಾಚಾರಿಯಾಗಿದ್ದರೆ ಅಂಥ ಜೀವನವೇ ದೇವಲೋಕ; ಮಿಥ್ಯವ ನುಡಿಯುತ್ತ ದುರಾಚಾರಿಯಾಗಿ ನಡೆಯುತ್ತಿದ್ದರೆ ಅದೇ ಮೃತ್ಯುಲೋಕ ಅಥವಾ ನರಕ. ಬಡತನವಿದ್ದರೂ ಗಂಡ ಹೆಂಡತಿ ಮಕ್ಕಳು ನೆಮ್ಮದಿಯಾಗಿ, ಆದರ್ಶವಂತರಾಗಿ ಬಾಳುತ್ತಿದ್ದರೆ ಅದೇ ದೇವಲೋಕ, ಸಿರಿವಂತಿಕೆ ತುಂಬಿ ತುಳುಕುತ್ತಿದ್ದರೂ ಗಂಡ -, ಹೆಂಡತಿ -ಮಕ್ಕಳಲ್ಲಿ ಸಾಮರಸ್ಯವಿಲ್ಲದಿದ್ದರೆ ಮನೆಯು ಅನಾಚಾರದ ಬೀಡಾಗಿದ್ದರೆ ಅದೇ ಮೃತ್ಯುಲೋಕ.

"ಪುರಾಣಗಳು ದೇವಲೋಕ, ಮೃತ್ಯುಲೋಕ ಕುರಿತು ಹೇಳುತ್ತವಲ್ಲ." ಎಂದು ಪ್ರಶ್ನಿಸಿದರೆ "ಇದನ್ನು ನಾನು ಒಪ್ಪುವುದಿಲ್ಲ; ಲಿಂಗದೇವನ ಸಾಕ್ಷಿಯಾಗಿ ಹೇಳುತ್ತೇನೆ. ನನ್ನ ಅಂತರಾತ್ಮವು ಹೀಗೆ ಹೇಳುತ್ತದೆ." ಎಂದು ದೃಢವಾಗಿ ಗುರು ಬಸವಣ್ಣನವರು ಹೇಳುತ್ತಾರೆ.

(ವಿ.ಸೂ : ಬಹಳ ಜನರು ದೇವಲೋಕ ಮರ್ತ್ಯಲೋಕವೆಂಬವು ಎಂದು ಹೇಳುತ್ತಾರೆ; ಮುದ್ರಿಸುತ್ತಾರೆ. 2 ಮತ್ತು 3ನೆಯ ಸಾಲಿನಲ್ಲಿರುವ ತತ್ವವನ್ನು ನೋಡಿದರೆ ದೇವಲೋಕ ಮೃತ್ಯುಲೋಕ ಎಂಬ ವಾಕ್ಯಗಳೇ ಸರಿ ಎಂದು ಕಾಣುತ್ತವೆ.)

244. ಪಾಪ-ಪುಣ್ಯ ತಮ್ಮ ಕೈಲಿವೆ

ಪುಣ್ಯ-ಪಾಪವೆಂಬವು ತಮ್ಮ ಇಷ್ಟವು ಕಂಡಿರೆ;
'ಅಯ್ಯಾ' ಎಂದಡೆ ಸ್ವರ್ಗ; 'ಎಲವೊ' ಎಂದಡೆ ನರಕ!
'ದೇವಾ, ಭಕ್ತಾ ಜಯಾ ಜೀಯಾ' ಎಂಬ ನುಡಿಯೊಳಗೆ
ಕೈಲಾಸವಿದ್ದುದೆ ಲಿಂಗದೇವಾ!

- ಬ.ವ.ದೀ.242

ಪುಣ್ಯವನ್ನಾಗಲೀ ಪಾಪವನ್ನಾಗಲೀ ಗಳಿಸುವುದು ತನ್ನ ಕೈಲೇ ಇದೆ. ಪರರಿಗೆ ಒಳ್ಳಿತನ್ನು ಮಾಡಿದಾಗ ಪುಣ್ಯ, ಪರರಿಗೆ ಕೆಡುಕನ್ನು ಮಾಡಿದಾಗ ಪಾಪ ಸಂಗ್ರಹವಾಗುತ್ತವೆ. ಈ ಮರ್ಮವನ್ನರಿತು ಕರ್ಮವನ್ನು ಮಾಡಿ ತನಗೆ ಬೇಕಾದುದನ್ನು ಗಳಿಸಿಕೊಳ್ಳಬಹುದು. ಅದೇ ರೀತಿ ತನ್ನ ಸುತ್ತಲೂ ಸ್ವರ್ಗವನ್ನಾಗಲೀ ನರಕವನ್ನಾಗಲೀ ನಿರ್ಮಾಣ ಮಾಡಿಕೊಳ್ಳುವುದೂ ತನ್ನ ಪರಿಧಿ ಯಲ್ಲೇ ಇದೆ. ಅಯ್ಯಾ, ಅಣ್ಣಾ ಎಂದು ವ್ಯವಹರಿಸಿದರೆ ಎಂಥವರೂ ಪ್ರೀತಿಯಿಂದ ಸ್ಪಂದಿಸುವರು. ಆಗ ಸ್ವರ್ಗವು ನಿರ್ಮಾಣವಾಗುತ್ತದೆ. ಎಲವೋ ಎಂದು ಉದ್ಧಟತನದಿಂದ, ಅಹಂಕಾರದಿಂದ ಮಾತನಾಡಿದರೆ ಎದುರಲ್ಲಿ ಇರುವವರಲ್ಲಿ ಕೋಪ, ಅಸಹನೆ ಜಾಗೃತವಾಗಿ ವಿರಸ ಉಂಟಾಗಿ ಜಗಳವೇ ಆರಂಭವಾಗುತ್ತದೆ. ಅದು ನರಕ ಸದೃಶ ವಾತಾವರಣವನ್ನು ಸೃಷ್ಟಿಸುತ್ತದೆ.

ದೇವ್ರೇ, ಭಕ್ತರೇ, ಅಪ್ಪಾವರೆ, ಅಣ್ಣಾವರೇ ಎಂದು ಸಂಬೋಧಿಸಿದರೆ ಎದುರಲ್ಲಿ ಇರುವವರೂ ಪ್ರೀತಿಯಿಂದ ಕಾಣುತ್ತಾರೆ. ನಿಮಗೆ ಜಯವಾಗಲಿ, ಜೀಯಾ (ಒಡೆಯ) ನಿಮ್ಮ ಅಪ್ಪಣೆಯಂತೆ ಆಗಲಿ ಎಂದು ವಿನಯದಿಂದ ಮಾತನಾಡಿದರೆ ಎಂಥವರೂ ಆದರಿಸುತ್ತಾರೆ. ಆಗ ಕೈಲಾಸವೇ ಸುತ್ತಲೂ ನಿರ್ಮಾಣವಾದಂತಹ ಉಲ್ಲಾಸಕರ ವಾತಾವರಣ ಸೃಷ್ಟಿಯಾಗುತ್ತದೆ.

245. ಶಿಷ್ಟಾಚಾರವೇ ಶಿವ ನಡೆ

ಏನಿ ಬಂದಿರಿ, ಹದುಳವಿದ್ದರೆ ಎಂದಡೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
ಕುಳ್ಳಿ ರೆಂದಡೆ ನೆಲ ಕುಳಿ ಹೋಹುದೆ?
ಒಡನೆ ನುಡಿದರೆ ಸಿರ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಲಿಂಗದೇವರು.

– ಬ.ವ.ದೀ.243

ಯಾರನ್ನೇ ಆಗಲಿ ಭೇಟಿಯಾದ ತಕ್ಷಣ ವಂದಿಸುವುದು, ಅಭಿನಂದಿಸುವುದು ಯೋಗಕ್ಷೇಮ ವಿಚಾರಿಸುವುದು ಕನಿಷ್ಠ ಶಿಷ್ಟಾಚಾರ. ಆದರೆ ಕೆಲವರು ತಮಗಿಂತ ಕೆಳಸ್ತರದಲ್ಲಿರುವವರನ್ನು ಕಂಡಾಗ ಅಂಥ ಯಾವ ಶಿಷ್ಟಾಚಾರವನ್ನೂ ಪಾಲಿಸುವುದಿಲ್ಲ. "ಏನು ಬಂದಿರಿ, ಕ್ಷೇಮವಾಗಿದ್ದೀರಾ?" ಎಂದು ಕಂಡ ತಕ್ಷಣವೇ ಮಾತನಾಡಿಸಿದರೆ ನಿಮ್ಮ ಶರೀರದ ಸೌಂದರ್ಯ ಹೊರಟು ಹೋಗುವುದೆ? ಹಾಗೆ ನೋಡಿದರೆ ಮುಖ ಗಂಟಿಕ್ಕಿದಾಗ ಅಸಹ್ಯವಾಗಿ ಕಾಣುವ ಮುಖವು ನಸುನಕ್ಕಾಗ ಚೆಂದಾಗಿ ಕಾಣುವುದು. ಬಂದವರ ಅಂತಸ್ತು ಏನೇ ಇರಲಿ ಆದರದಿಂದ "ಕುಳ್ಳಿರಿ" ಎಂದರೆ ನೆಲವು ತಗ್ಗು ಬೀಳುವುದೆ? ಬಂದವರ ಜೊತೆಗೆ ತಕ್ಷಣವೇ ಮಾತನಾಡಿದರೆ ತಲೆ, ಹೊಟ್ಟೆ ಒಡೆಯುವುದೆ? ಅನೇಕರು ಆಢ್ಯತೆಯಿಂದ ಬಂದ ಜನರನ್ನು ಬಹಳಷ್ಟು ಕಾಯಿಸುವರು. ಬಹಳ ಕಾಲದವರೆಗೆ ದೈನ್ಯತೆಯಿಂದ ಜನರು ಕಾಯ್ದ ಮೇಲೆ ಠೀವಿಯಿಂದ ಏನಾಗಬೇಕಿತ್ತು ? ಎಂದು ಗತ್ತಿನಿಂದ ಕೇಳುವರು. ಕೊಡಲಿಕ್ಕೆ ಅಂಬಲಿಯೋ, ಹಾಲೋ, ಪಾನಕವೋ ಇರದಿದ್ದರೇನಂತೆ ಒಂದು ಒಳ್ಳೆಯ ಮಾತನಾಡುವ ಸೌಜನ್ಯದ ಗುಣವಾದರೂ ಇರಬಾರದೆ? ಅದೂ ಇರದಿದ್ದರೆ ಲಿಂಗದೇವನು ವ್ಯಕ್ತಿಯನ್ನು ಮೇಲೇಳಲಾರದಂತೆ ಕೆಡಹುವನು.

246. ಶರಣರೊಡನೆ ಮನದೆರೆದು ಮಾತನಾಡುವುದು

ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ?
ನಗುವುದು ನುಡಿವುದು ಶಿವಭಕ್ತರೊಡನೆ
ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯಾ?
ನಮ್ಮ ಲಿಂಗದೇವನ ಶರಣರೊಡನೆ
ಮನದೆರದು ಮಾತನಾಡುವುದಯ್ಯಾ.

– ಬ.ವ.ದೀ.244

ಈ ಸಂಸಾರ ಒಂದು ಸಾಗರ. ಇದರಲ್ಲಿ ಸುಖದುಃಖಗಳ ತೆರೆಗಳು ಅಪಾರ. ಸದಾ ಒಂದು

ಬಗೆಯ ಒತ್ತಡ, ಉದ್ವಿಗ್ನತೆ ತುಂಬಿರುತ್ತದೆ. ಬದುಕು ಭಾರವಾಗದೆ ಸಂತಸಮಯವಾಗಬೇಕಾದರೆ ಭಕ್ತರೊಡನೆ ಶರಣರೊಡನೆ ನಗುನಗುತ್ತ ಇರಬೇಕು; ಹರ್ಷದಿಂದ ಮಾತನಾಡಬೇಕು. ತಾನು ಶ್ರೇಷ್ಠನೆಂಬ ಹಮ್ಮಿನಿಂದ ಹುಬ್ಬು ಬಿಮ್ಮಿನಿಂದ ಬಿಗಿದುಕೊಂಡ ಮುಖಭಾವ ತಾಳಿರಬಾರದು. ನಿಜವಾದ ಶರಣರು ಕಷ್ಟ - ಸುಖಗಳನ್ನು ಹಂಚಿಕೊಳ್ಳುತ್ತಾರೆ, ಸಂತೈಸುತ್ತಾರೆ. ಜೊತೆಗೆ ಅವರು ಮನದೆರೆದು ಮಾತನಾಡಿದಾಗ ದಿವ್ಯಜ್ಞಾನದ ಹೊಳೆಯೇ ಹರಿಯುತ್ತದೆ. ಆದ್ದರಿಂದ ಜ್ಞಾನವನ್ನು ಪಡೆದು ಕೊಳ್ಳಬೇಕೆಂಬ ಭಕ್ತ ಮುಚ್ಚುಮರೆಯಿಲ್ಲದೆ ನಿಷ್ಕಪಟಿಯಾಗಿ ಶರಣರೊಡನೆ ವರ್ತಿಸುತ್ತ ಮನದೆರೆದು ಮಾತನಾಡಬೇಕು.

247. ದೇವನಲ್ಲಿ ಪ್ರೇಮ

ಭಕ್ತಿ ಎಂಬ ನಿಧಾನವ ಸಾಧಿಸುವಡೆ
ಶಿವಪ್ರೇಮವೆಂಬ ಅಂಜನವ ಹಚ್ಚಿಕೊಂಬುದು
ಭಕ್ತನಾದವಂಗೆ ಇದೇ ಪಥವಾಗಿರಬೇಕು
ನಮ್ಮ ಲಿಂಗದೇವನ ಶರಣರ ಅನುಭಾವ ಗಜವೈದ್ಯ. - ಬ.ವ.ದೀ.245

ಭಕ್ತಿ ಎನ್ನುವುದು ಒಂದು ಅಮೂಲ್ಯ ಸಂಪತ್ತು. ಎಲ್ಲರೂ ಭಕ್ತಿಯನ್ನು ಮಾಡುವಂತೆ ತೋರುವುದಾದರೂ ಅದು ನಿಜ ಭಕ್ತಿಯಾಗಿರದೆ ತೋರಿಕೆಯ ಭಕ್ತಿಯಾಗಿರುತ್ತದೆ. ಭಕ್ತಿಯು ಹೃದಯದ ಅಂತರಾಳದಲ್ಲಿರುವ ನಿಧಿಯಂತೆ. ಭೂಮಿಯ ಅಂತರಾಳದಲ್ಲಿ ಇರುವ ನಿಧಿಯನ್ನು ಕಂಡು ಹಿಡಿಯಲು ಅಂಜನವನ್ನು ಹಚ್ಚಿಕೊಳ್ಳುವರು. ಅದೇ ರೀತಿ ಭಕ್ತಿಯನ್ನು ಕರಗತ ಮಾಡಿಕೊಳ್ಳ ಬೇಕಾದರೆ ಶಿವಪ್ರೇಮ (Love of God) ಎಂಬ ಅಂಜನವ ಹಚ್ಚಿಕೊಳ್ಳಬೇಕು.

248. ವಿನಯಪೂರ್ಣ ವರ್ತನೆ

ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತ
ಮೃದು ವಚನವೆ ಸಕಲ ಜಪಂಗಳಯ್ಯ
ಮೃದು ವಚನವೆ ಸಕಲ ತಪಂಗಳಯ್ಯ
ಸದುವಿನಯವೆ ಸದಾಶಿವನ ಒಲುಮೆಯಯ್ಯಾ
ಲಿಂಗದೇವಯ್ಯನಂತಲ್ಲದೊಲ್ಲನಯ್ಯ - ಬ.ವ.ದೀ.246

ಎದುರಾದ ಭಕ್ತರಿಗೆ ಶರಣು ಎಂದು ಕೈ ಮುಗಿಯುವುದು ಶಿಷ್ಟಾಚಾರ. ಅದನ್ನು ಪಾಲಿಸಲೇ ಬೇಕು. ಒಬ್ಬ ವ್ಯಕ್ತಿ ಪೂಜಾ ಸಮಯದಲ್ಲಿ ಸಹಸ್ರಾರು ಜಪ ಮಾಡಿ, ಇತರರೊಡನೆ ಸಿಡಿಸಿಡಿ ಮಾತನಾಡಿರೆ, ವರ್ತಿಸಿದರೆ ಆ ಪೂಜೆಯೆಲ್ಲ ವ್ಯರ್ಥ. ಮೃದು ಮಾತುಗಳಿಂದ ಇತರರೊಡನೆ ವ್ಯವಹರಿಸಿದರೆ ಆ ಮಾತುಗಳೇ ಜಪಗಳಾಗುವುವು. ವಿನಯಪೂರ್ಣ ವರ್ತನೆಯೇ ತಪಸ್ಸಾಗುವುದು. ಸದ್ವಿನಯದಿಂದ ಲಿಂಗದೇವನ ಒಲುಮೆಯಾಗುವುದು.

ನಡೆಯಲ್ಲಿ ವಿನಯ, ಮಾತಿನಲ್ಲಿ ಮೃದುತ್ವವಿದ್ದರೆ ವ್ಯಕ್ತಿಯು ಎಂಥವರನ್ನಾದರೂ ಆಕರ್ಷಿಸಲು ಸಾಧ್ಯ. ಒಂದು ಊರಿನಲ್ಲಿ ಓರ್ವ ವಿಧವೆ ಹೆಣ್ಣುಮಗಳು ಕೂಲಿನಾಲಿ ಮಾಡಿ ತನ್ನ ಒಬ್ಬನೇ ಮಗನನ್ನು ಓದಿಸುತ್ತಿದ್ದಳು. ಆ ಊರಲ್ಲಿ ಪ್ರಾಥಮಿಕ ಶಾಲೆ ಮಾತ್ರ ಇತ್ತು. ಅದಾದ ಬಳಿಕ ಮಾಧ್ಯಮಿಕ ತರಗತಿ ಓದಬೇಕಾದರೆ ಬೇರೆ ಊರಿಗೆ ಹೋಗಬೇಕಾಗುತ್ತಿತ್ತು. ಮಾರ್ಗ ಮಧ್ಯೆ ಒಂದು ದೊಡ್ಡ ಬೆಟ್ಟವಿತ್ತು. ಅಲ್ಲಿ ಹೋಗುವಾಗ ಹುಡುಗನಿಗೆ ಭಯವೆನಿಸುತ್ತಿತ್ತು. ಒಂದು ದಿನ ಅವನು ತಮಾಷೆಗಾಗಿ, "ಏಯ್ ಯಾರದು?" ಎಂದ. ಆಗ ಅದೇ ರೀತಿ ಯಾರೋ ಅಂದರು. ಭಯ ಜಾಸ್ತಿಯಾಯಿತು. "ಲೇಯ್ ಎರಡು ಬೇಕೇನು?" ಎಂದ. ಅವನೂ ತಿರುಗಿ ಹಾಗೆಯೇ ಅಂದ! ಈ ಹುಡುಗ ತಾಯಿಗೆ ಹೇಳಿದ, "ಅಮ್ಮಾ ನಾನು ಶಾಲೆಗೆ ಹೋಗುವುದಿಲ್ಲ. ದಾರಿಯಲ್ಲಿ ಬೆಟ್ಟದ ಬಳಿ ಒಬ್ಬ ತುಂಟ ಹುಡುಗನಿದ್ದಾನೆ. ಅವನು ಹೊಡೆಯುವುದಾಗಿ ಹೇಳಿದ್ದಾನೆ." ಎಂದು ನಡೆದುದನ್ನೆಲ್ಲ ವಿವರಿಸಿದ. ಆಗ ತಾಯಿ ಹೇಳಿದಳು. "ಮಗು, ಅವನು ನಿನ್ನ ಸ್ನೇಹಿತ. ನೀನು ಅಂದುದಕ್ಕೆ ಕ್ಷಮೆ ಕೇಳು. ಅವನಿಗಾಗಿ ಭಯಪಡಬೇಡ" ಎಂದಳು.

ಮರುದಿನ ಈ ಹುಡುಗ ಹೋದ, "ಗೆಳೆಯಾ. ನಿನ್ನ ನಾನು ಎಲವೋ ಎಂದು ಬೈದೆ. ಅದು

ತಪ್ಪು. ಕ್ಷಮೆ ಕೇಳುತ್ತೇನೆ." ಆಗ, ಆ ಧ್ವನಿಯೂ ಅದೇ ರೀತಿ ಹೇಳಿತು. ಹುಡುಗನಿಗೆ ಖುಷಿಯಾಯಿತು. "ಹಾಗಿದ್ದರೆ ಇನ್ನು ಮೇಲೆ ನಾನು ನೀನು ಗೆಳೆಯರಾಗೋಣ." ಎಂದ. ಆ ಧ್ವನಿಯೂ ಹಾಗೆಯೇ ಅಂದಿತು. ಹುಡುಗನಿಗೆ ಸಂತೋಷವಾಯಿತು. ಶಾಲೆಗೆ ಧೈರ್ಯವಾಗಿ ಹೋಗ ತೊಡಗಿದ.

ಅಲ್ಲಿ ಯಾವ ಮಿತ್ರನೂ ಇರಲಿಲ್ಲ. ಅದು ಪ್ರತಿಧ್ವನಿ ಮಾತ್ರ. ಹಾಗೆಯೇ ಈ ಜಗತ್ತು ಸಹ ಪ್ರತಿಧ್ವನಿ ಕೊಡುವ ಒಂದು ಬೆಟ್ಟದಂತೆ. ನಮ್ಮ ನಡೆ - ನುಡಿಗೆ ತಕ್ಕ ಪ್ರತಿಕ್ರಿಯೆಯನ್ನು ಕೊಡುವ ಕಾರಣ ನಾವು ಸದ್ವಿನಯದ ವರ್ತನೆ ಅಂಗವಿಸಿಕೊಳ್ಳಬೇಕು.

249. ನಡೆ - ನುಡಿಯಲ್ಲಿ ಶಿಷ್ಟಾಚಾರ

ಇತ್ತ ಬಾರಯ್ಯ, ಇತ್ತ ಬಾರಯ್ಯ ಎಂದು
ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು
ಮತ್ತೆ ಕೆಲಕ್ಕೆ ಹೋಗಿ ಶರಣೆಂದು ಹಸ್ತ ಬಾಯನೆ ಮುಚ್ಚಿ
ಕಿರಿದಾಗಿ ಭೃತ್ಯಾಚಾರವ ನುಡಿದು
ವಿನಯ ತದ್ಭಾವನವುಳ್ಳಡೆ ಎತ್ತಿಕೊಂಬನಯ್ಯಾ
ಲಿಂಗದೇವ ಪ್ರಮಥರ ಮುಂದೆ. - ಬ.ವ.ದೀ.247

ಈ ವಚನದಲ್ಲಿ ಧರ್ಮಪಿತ ಬಸವಣ್ಣನವರು ನಡೆ - ನುಡಿಯ ಶಿಷ್ಟಾಚಾರವನ್ನು ಕಲಿಸುತ್ತಾರೆ. ಶರಣ ಬಂಧುಗಳೆಲ್ಲ ಒಂದು ಜಾಗದಲ್ಲಿ ಸಮಾವೇಶಗೊಂಡು ಕುಳಿತಿರುವಾಗ ಇಲ್ಲಿ ಬಾರಯ್ಯ ಎಂದು ಬಂದು ನಿಂತ ವ್ಯಕ್ತಿಯನ್ನು ಕರೆಯುತಾರೆ. ಆಗ ಆತ ಕರೆಯುವವರ ಹತ್ತಿರ ಹೋಗಬೇಕು. ನಿಂತಲ್ಲೇಕೂಗಿ ಕಿರುಚಬಾರದು. ಸಮೀಪಕ್ಕೆ ಹೋಗಿ ಶರಣು ಎಂದು ಸಮೂಹಕ್ಕೆ ಬಗ್ಗಿ ವಂದಿಸಿ, ಕೈಯನ್ನು ಬಾಯಿಗೆ ಅಡ್ಡವಾಗಿಟ್ಟುಕೊಂಡು, ವಿನಯ ಭಾವದಿಂದ ಏನೆಂದು ಕೇಳಬೇಕು ಇಂಥ ಶಿಷ್ಟಾಚಾರದ ವರ್ತನೆಯಿಂದ ಶರಣ ಸಮೂಹದಲ್ಲಿ ವ್ಯಕ್ತಿಯು ಗೌರವಾನ್ವಿತ ಸ್ಥಾನವನ್ನು ಪಡೆಯುವನು.

250. ಪರಸ್ಪರ ದಾಸೋಹ

ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳಯಿಸಿಕೊಂಡಡೆ
ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಲಿಂಗದೇವನು - ಬ.ವ.ದೀ.247

ಒಬ್ಬ ಶರಣನು ಇನ್ನೊಬ್ಬ ಶರಣನ ಮನೆಗೆ ಬಂದಾಗ ಮನೆಯವರು ಭೃತ್ಯಾಚಾರವನ್ನು ಅಂದರೆ ಸೇವೆಯನ್ನು ಮಾಡಬೇಕು. ಹಿಂದಿನ ಕಾಲದಲ್ಲಿ ತಲೆಬಾಗಿಲಲ್ಲಿ ನೀರಿನ ತೊಟ್ಟಿ ಅಥವಾ ಗುಡಾಣ ಇರುತ್ತಿದ್ದವು. ಹೊರಗಿನಿಂದ ಬಂದವರು ಚಪ್ಪಲಿ ಬಿಟ್ಟು ಕಾಲು ತೊಳೆದುಕೊಂಡು ಒಳಗೆ ಹೋಗುತ್ತಿದ್ದರು. ಅತಿಥಿಗಳಾಗಿ ಯಾರಾದರೂ ಶರಣರು ಬಂದಾಗ ಮನೆಯವರು ತಂಬಿಗೆ ತುಂಬಿ ಪಾದ ತೊಳೆದುಕೊಳ್ಳಲು ನೀರನ್ನು ಕೊಡುವರು. ಗುರು ಜಂಗಮರಾದರೆ ಪಾದಕ್ಕೆ ನೀರನ್ನು ಎರೆಯುವರು.

ಆಗ ಶರಣನು ಆತಿಥೇಯರ ಕೈಯಿಂದ ತಂಬಿಗೆ ಪಡೆದುಕೊಂಡು ತನ್ನ ಕಾಲುಗಳನ್ನು ತಾನೇ ತೊಳೆದುಕೊಳ್ಳಬೇಕು. ತಾನು ಶ್ರೇಷ್ಠನೆಂಬ ಹಮ್ಮಿನಿಂದ ಆತಿಥೇಯರ ಕೈಯಿಂದ ಕಾಲು ತೊಳೆಸಿಕೊಂಡರೆ ಅವನ ಶರಣತ್ವಕ್ಕೆ ಕುಂದು!

ಎಷ್ಟೇ ಗಾವುದ ದೂರದಲ್ಲಿದ್ದರೂ ಸಹಧರ್ಮೀಯರು ಅರ್ಥಾತ್ ಧರ್ಮ ಬಂಧುಗಳು ಪರಸ್ಪರ ಭೇಟಿಯಾಗುತ್ತಿರಬೇಕು. ಇದುವೇ ಸದಾಚಾರ. ಅಂತಹ ಸಂದರ್ಶನಕ್ಕೆ ಹೋದಾಗ ಯಜಮಾನಿಕೆ ಮಾಡುತ್ತ ಆತಿಥೇಯರಿಂದ ಗೌರವ - ಉಪಚಾರಗಳನ್ನು ನಿರೀಕ್ಷಿಸದೆ ತಾನೂ ಅವರೊಡನೆ ಒಂದಾಗಿ ದಾಸೋಹ ಸೇವೆ ಮಾಡಬೇಕು. ಆಗಾಗ ಧರ್ಮ ಬಂಧುಗಳೆಲ್ಲ ಸೇರಿ ದಾಸೋಹ ಏರ್ಪಡಿಸಿದರೆ ಲಿಂಗದೇವನಿಗೆ ಅಪಾರ ಆನಂದವಾಗಿ, ಅನುಗ್ರಹಿಸುವನು.

251. ದಯವೇ ಧರ್ಮದ ಮೂಲ

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು,
ದಯವೇ ಧರ್ಮದ ಮೂಲವಯ್ಯಾ!
ಲಿಂಗದೇವಯ್ಯನಂತಲ್ಲದ್ದೊಲ್ಲನಯ್ಯಾ. - ಬ.ವ.ದೀ.249

ದಯವಿಲ್ಲದ ಧರ್ಮವು ಅದಾವುದಯ್ಯ? ಎಂದು ಅನೇಕರು ಹೇಳುತ್ತಾರೆ. ಆದರ ಅರ್ಥ ದಯವಿಲ್ಲದೆ ಇರುವ ಧರ್ಮವು ಯಾವುದು? ಎಲ್ಲ ಧರ್ಮಗಳಲ್ಲಿಯೂ ದಯೆ ಇದೆ ಎಂದಂತಾಗುವುದು. ಜಗತ್ತಿನಲ್ಲಿರುವ ಎಷ್ಟೋ ಧರ್ಮಗಳಲ್ಲಿ ದಯೆಯೇ ಇಲ್ಲ. ಇತರರನ್ನು ನಡೆಸಿಕೊಳ್ಳುವುದರಲ್ಲಿ, ಮಹಿಳೆಯರ ಕುರಿತು, ಪ್ರಾಣಿಗಳ ಕುರಿತು ಕ್ರೌರ್ಯವನ್ನು ಕಾಣುತ್ತೇವೆ. ಆದ್ದರಿಂದ ಈ ವಾಕ್ಯವು ದಯವಿಲ್ಲದ ಧರ್ಮವು ಅದೇವುದಯ್ಯ? ಎಂದಿರಬೇಕು. ಇದರರ್ಥ ದಯವಿಲ್ಲದ ಧರ್ಮವು ಅದೆಂತಹ ಧರ್ಮ? ಅದು ಧರ್ಮವೇ ಅಲ್ಲ ಎಂದಾಗುತ್ತದೆ.

ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ. ಮಾನವರಲ್ಲಿ ಮಾತ್ರವಲ್ಲ ಸಕಲ ಪ್ರಾಣಿಗಳಲ್ಲಿಯೂ ದಯವಿರಬೇಕು. ಅವುಗಳ ಬದುಕನ್ನು ಹಕ್ಕನ್ನು ನಾವು ಸಂರಕ್ಷಿಸಬೇಕು. ನಾಲಿಗೆಯ ಚಪಲಕ್ಕಾಗಿ ಮಾಂಸಾಹಾರವನ್ನು ಮಾಡಬೇಕೆಂದು ಜೀವಿಗಳ ಹತ್ಯೆಯನ್ನು ಮಾಡಬಾರದು. ಧರ್ಮದ ಮೂಲಸೆಲೆಯೇ ದಯೆ. ದೇವರು ದಯಾಭಾವದಿಂದ, ಜೀವಿಗಳ ಮೇಲೆ ದಯೆಯಿಟ್ಟು ಬದುಕುವ ಕಲೆಯನ್ನು ತಿಳಿಸುವ ಮಹಾಪುರುಷರನ್ನು ಸೃಷ್ಟಿಸಿದ. ಅವರು ಜೀವಾತ್ಮರುಗಳ ಮೇಲಿನ ದಯೆಯಿಂದ ಅದ್ವಿತೀಯ ತ್ಯಾಗವನ್ನು ಮಾಡಿ ಸಂದೇಶವನ್ನು ನೀಡಿದರು. ಪ್ರಾಣಿಗಳನ್ನು ಕುರಿತು ಇರುವ ಅನುಕಂಪವೇ ದಯೆಯಾದರೆ, ಮಾನವರನ್ನು ಕುರಿತು ಇರುವ ಅನುಕಂಪವೇ ಮಾನವೀಯತೆ. ದಯೆ -ಮಾನವೀಯತೆಗಳೇ ಬದುಕಿನ ಜೀವಜಲವಾಗಬೇಕು. ಈ ಗುಣಗಳು ಇಲ್ಲದಿದ್ದರೆ ಸೃಷ್ಟಿಕರ್ತನೂ, ಸಕಲ ಜೀವಾತ್ಮರ ತಂದೆಯೂ ಆದ ಲಿಂಗದೇವನು ಅಂಥ ವ್ಯಕ್ತಿಯನ್ನು ಒಲ್ಲನು, ಅವನಿಗೆ ಒಲಿಯನು.

252. ಕೋಪವು ದೊಡ್ಡ ಶತ್ರು

ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ?
ತನಗಾದ ಆಗೇನು? ಅವರಿಗಾದ ಚೇಗೆಯೇನು?
ತನುವಿನ ಕೋಪ ತನ್ನ ಹಿರಿತನದ ಕೇಡು
ಮನದ ಕೋಪ ತನ್ನ ಅರಿವಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರಮನೆಯ ಸುಡುವುದೇ ? ಲಿಂಗದೇವಾ! - ಬ.ವ.ದೀ.250

ಯಾರಾದರೂ ತನ್ನ ಮೇಲೆ ಕೋಪಗೊಂಡು ವರ್ತಿಸಿದರೆ ತಾನೂ ಮರಳಿ ಕೋಪವನ್ನು ಪ್ರದರ್ಶಿಸಬಾರದು. ಕೋಪ ಒಂದು ಬೆಂಕಿ. ಎದುರಾಳಿ ಬೆಂಕಿಯ ಉಂಡೆ ಎಸೆದರೆ ತಾನೂ ಪ್ರತಿಯಾಗಿ ಬೆಂಕಿಯನ್ನು ಎಸೆಯದೆ ಶಾಂತವರ್ತನೆಯ ತಣ್ಣೀರು ಸುರಿಯಬೇಕು. ಅವರು ಕೋಪಗೊಂಡು ವರ್ತಿಸಿದ್ದಕ್ಕೆ ಪ್ರತಿಯಾಗಿ ನೀನೂ ಕೋಪಗೊಂಡರೆ ನಿನಗಾದ ಲಾಭವೇನು? ಅವರಿಗಾದ ನಷ್ಟವೇನು?

ಕೋಪ ಒಂದು ಶತ್ರು. ಶತ್ರುವು ಅವಮಾನ ಮಾಡಿ ಮರ್ಯಾದೆ ಕಳೆಯಲು ಯತ್ನಿಸುವನು. ಅದೇ ರೀತಿ ತನುವಿನ ಮೇಲೆ ಕೋಪವು ದಾಳಿ ಮಾಡಿದಾಗ ಶರೀರ ಸ್ವಾಸ್ಥ್ಯ ಕಳೆದುಕೊಳ್ಳಬಹುದು, ಉದ್ವಿಗ್ನತೆಯಿಂದ ಹೃದಯಾಘಾತ, ಮೆದುಳಿಗೆ ಆಘಾತ ಮುಂತಾಗಿ ಸಂಭವಿಸಬಹುದು. ಇದಕ್ಕಿಂತ ಮಿಗಿಲಾಗಿ ಕಣ್ಣು ಕೆಂಪಾಗಿ ಶರೀರವು ಗಡಗಡ ನಡುಗುತ್ತ, ಬಾಯಿಂದ ಬೈಗುಳಗಳು ಉದುರುತ್ತಿದ್ದಂತೆಯೇ ವ್ಯಕ್ತಿಯ ಹಿರಿತನ ಕುರಿತು ಇದ್ದ ಗೌರವ ಕರಗಿ ಎಂಥಾ ಕ್ಷುಲ್ಲಕ ಮನುಷ್ಯ ಎಂದು ಜನರು ಉದ್ಗಾರ ತೆಗೆಯುವಂತೆ ಆಗುತ್ತದೆ. ಕೆಲವರು ಕೋಪವನ್ನು ಹೊರಗೆ ತೋರಿಸಿ ಕೊಳ್ಳದೆ ಒಳಗೇ ನುಂಗಿಕೊಳ್ಳುತ್ತಾರೆ. ಅದರ ಪರಿಣಾಮ ಮನೋರೋಗ, ಖಿನ್ನತೆ; ಇದು ಬುದ್ಧಿ ಶಕ್ತಿಯನ್ನು ಮಂಕುಗೊಳಿಸಿ, ವಿವೇಚನಾ ಶಕ್ತಿಯನ್ನು ಕುಂಠಿತಗೊಳಿಸುತ್ತದೆ.

ಮನೆಯೊಳಗೆ ಹಾಕಿದ ಬೆಂಕಿ ಮೊದಲು ತನ್ನ ಮನೆಯನ್ನು ಸುಡುತ್ತದೆ. ಅದೇ ರೀತಿ ತನ್ನ ಮನದೊಳಗಣ ಕೋಪ ತನ್ನ ವ್ಯಕ್ತಿತ್ವವನ್ನು ನಾಶ ಮಾಡುತ್ತದೆ. ಕೋಪದ ಆವೇಶದಲ್ಲಿ ಕೊಲೆಗಳಾಗುತ್ತವೆ, ಮನಸ್ಸುಗಳು ಒಡೆಯುತ್ತವೆ, ಸ್ನೇಹ ಕೆಡುತ್ತದೆ. ಆದ್ದರಿಂದ ಕೋಪವನ್ನು ನಿಗ್ರಹಿಸುವುದು ಅತೀ ಅವಶ್ಯಕವಾಗಿದೆ.

253. ಸಮಷ್ಟಿಯ ಹಿತಕ್ಕಾಗಿ ಸಹನೆ

ಅರ್ಥಕ್ಕೆ ತಪ್ಪಿದರೇನು ಪ್ರಾಣಕ್ಕೆ ತಪ್ಪಿದರೇನು
ಅಭಿಮಾನಕ್ಕೆ ತಪ್ಪಿದರೇನು?
ಶರಣರು ಶರಣರಲ್ಲಿ ಅವಗುಣವನರಸುವರೆ?
ಲಿಂಗದೇವನ ಶರಣರು ನೊಂದು ಸೈರಿಸಬೇಕು. - ಬ.ವ.ದೀ.251

ಸಹ ಧರ್ಮೀಯರೊಡನೆ ಬದುಕುವ ಶರಣರಲ್ಲಿ ಬಹಳಷ್ಟು ಸಹನೆ ಇರಬೇಕು. ಏಕೆಂದರೆ ಮನುಷ್ಯ ಹಲವಾರು ದೌರ್ಬಲ್ಯಗಳ ಆಗರ. ಸಮಾಜದ ಕಾರ್ಯಕ್ಕೆಂದು ದೇಣಿಗೆ ಸಂಗ್ರಹಿಸುವಾಗ ದೇಣಿಗೆ ಕೊಡುತ್ತೇನೆಂದು ವಾಗ್ದಾನ ಮಾಡಿ ಸನ್ಮಾನವನ್ನು ಮಾಡಿಸಿಕೊಳ್ಳುತ್ತಾನೆ. ಹಣವನ್ನು ಕೊಡದೆ ಅರ್ಥಕ್ಕೆ ತಪ್ಪುತ್ತಾನೆ. ಸಮಾಜದ ಪರವಾಗಿ ಹೋರಾಟವೇನಾದರೂ ನಡೆದಿದ್ದರೆ ಮೆಲ್ಲನೆ ಜೀವಗಳ್ಳನಾಗಿ ತಪ್ಪಿಸಿಕೊಂಡು ಪ್ರಾಣಕ್ಕೆ ತಪ್ಪುತ್ತಾನೆ. ಸಮಾಜದ ಮೇಲಿನ ಅಭಿಮಾನದಿಂದ ಶರಣರಿಗೆ, ಇತಿಹಾಸಕ್ಕೆ ಸಮಾಜಕ್ಕೆ ಅವಮಾನವಾದಾಗ ಹೋರಾಟ, ಚಳುವಳಿ ನಡೆವರೆ ಆಗ ಅಭಿಮಾನ ಶೂನ್ಯನಾಗಿ ವರ್ತಿಸಿ ಅಭಿಮಾನಕ್ಕೆ ತಪ್ಪುತ್ತಾನೆ. ಇಂಥ ಪ್ರಸಂಗದಲ್ಲಿ ಸಮಾಜ ಬಾಂಧವರು ಸಿಟ್ಟಿಗೆದ್ದು ಸಾಮಾಜಿಕ/ ಧಾರ್ಮಿಕ ಬಹಿಷ್ಕಾರ ಹಾಕಬಾರದು. ತನ್ನ ಮನೆಯ ಮಗ ತಪ್ಪು ಮಾಡಿದರೆ ಹೇಗೆ ಮನೆಯಿಂದ ಹೊರಹಾಕದೆ ಇಂಬಿಟ್ಟುಕೊಳ್ಳಲಾಗುವುದೋ ಹಾಗೆ ಧರ್ಮ ಬಂಧುವನ್ನೂ ಇಂಬಿಟ್ಟುಕೊಳ್ಳಬೇಕು. ಶರಣರು ಶರಣರಲ್ಲಿ ಅವಗುಣಗಳನ್ನು ಹುಡುಕುತ್ತಲಿರಬಾರದು. ಕೆಲವೊಮ್ಮೆ ಸಹ ಧರ್ಮಿಗಳು ತಪ್ಪು ಮಾಡಿದರೆ ಅಥವಾ ಬುದ್ಧಿ ಹೇಳಲು ಹೋದಾಗ ಸಿಟ್ಟಿಗೆದ್ದು ನಿಂದಿಸಿದರೆ ಬಹಳಷ್ಟು ನೊಂದುಕೊಳ್ಳಬಾರದು. ತಮಗೆ ನೋವಾದರೂ ಚಿಂತೆಯಿಲ್ಲ ವಿವೇಕಿಗಳು ಸಹಿಸಿಕೊಂಡು, ಇಂಬಿಟ್ಟುಕೊಳ್ಳಬೇಕು.

ಸಮಾಜ ಸಂಘಟನೆ ಮಾಡಬೇಕೆಂಬ ಶರಣರು ಈ ವಚನದಿಂದ ಕಲಿಯಬೇಕಾದುದು ಬಹಳವಿದೆ. ವ್ಯಕ್ತಿಗಳು ತಮ್ಮ ಪಾಡಿಗೆ ತಾವು, ತಮ್ಮ ಕುಟುಂಬಕ್ಕೆ ಮಾತ್ರ ಸೀಮಿತರಾಗಿ ಬದುಕುವುದಾದರೆ ಹೆಚ್ಚಿನ ಸಮಸ್ಯೆ ಕಾಡವು. ಸಂಘ -ಸಂಸ್ಥೆ ಕಟ್ಟಬೇಕು ಎನ್ನುವವರು ಶೀಘ್ರ ಕೋಪಿಗಳನ್ನು, ನಾಲಿಗೆ ಸಡಿಲವಿರುವ ಅಪ್ರಬುದ್ಧರನ್ನು, ಕೈಯೆತ್ತಿ ದಾನ ಮಾಡದ ಜಿಪುಣರನ್ನು -ಹೀಗೆ ಬಗೆ ಬಗೆಯ ಜನರನ್ನು, ಅವರ ಮಾತುಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ.

254. ದ್ವೇಷ ಬೇಡ

ಕಾಣದ ಠಾವಿನಲ್ಲಿ ಜರಿದರೆಂದಡೆ ಕೇಳಿ ಪರಿಣಾಮಿಸಬೇಕು.
ಅದೇನು ಕಾರಣವೆಂದಡೆ
ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ
ಎನ್ನ ಮನದ ತದ್‌ದ್ವೇಷವಳಿದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು, ಲಿಂಗದೇವಾ - ಬ.ವ.ದೀ.252

ಯಾರಾದರೂ ಎದುರು ನಿಂತು ಮುನಿದಾಗ ತಾನೂ ಸಹ ಮುನಿಯಬಾರದು ಎಂಬ ಸಂದೇಶವನ್ನು ಧರ್ಮಪಿತ ಬಸವಣ್ಣನವರು ವಚನ 252ರಲ್ಲಿ ಕೊಟ್ಟರೆ ಈಗ ಬೆನ್ನು ಹಿಂದೆ ಜರಿವವ ರೊಡನೆ ಹೇಗೆ ವರ್ತಿಸಬೇಕು ಎಂಬುದನ್ನು ಹೇಳುವರು.

ಯಾರಾದರೂ ಬಂದು ಹೇಳುತ್ತಾರೆ, "ನೋಡಿ, ಅವರು ನಿಮ್ಮನ್ನು ಜರಿದು ಮಾತನಾಡುತ್ತಿದ್ದರು." ಎಂದು. ಆಗ ಸಾಮಾನ್ಯರು ಕೋಪದಿಂದ ಹಾರಾಡಿ, "ಹಾಗೋ, ನನ್ನ ಸುದ್ದಿ ಅವನಿಗೇಕೆ? ನನ್ನ ಕೈಗೆ ಸಿಗಲಿ ಇರಿ. ಜನ್ಮವನ್ನು ಜಾಲಾಡಿ ಬಿಡುತ್ತೇನೇ ಎನ್ನಬಹುದು. ಆದರೆ

ಶರಣನು ಹಾಗೆ ಹಾರಾಡಬಾರದು."ಅಹುದೆ? ನನಗೆ ತುಂಬಾ ಸಂತೋಷವೆನಿಸುತ್ತದೆ. ಕಾರಣವೇನೆಂದರೆ ನಾನು ಅವರಿಗೆ ಏನನ್ನೂ ಕೊಡದೆ, ಅವರಿಂದ ಏನನ್ನೂ ಕೊಳ್ಳದೆ ನನ್ನನ್ನು ಜರಿದು ಅವರು ಪುಕ್ಕಟ್ಟೆಯಾಗಿ ಸಂತೋಷ ಪಡುತ್ತಿದ್ದಾರೆ. ಅವರ ಸಂತೋಷಕ್ಕೆ ನಾನು ಕಾರಣನಾದುದಕ್ಕೆ ನನಗೆ ಹರ್ಷವಾಗಿದೆ. ಲಿಂಗದೇವಾ, ಅವರು ನನ್ನ ಎದುರು ಬಂದು ನಿಂತಾಗ ಇದೇನೂ ನನಗೆ ನೆನಪಾಗದಿರಲಿ, ಅವರ ಬಗ್ಗೆ ದ್ವೇಷ ಹುಟ್ಟದಿರಲಿ. ಆ ಶರಣರನ್ನು ಕಂಡಾಗ ನಾನು ಶರಣು ಎಂದು ವಂದಿಸುವ ಭಾಗ್ಯವನ್ನು ದಯಪಾಲಿಸು ಎನ್ನಬೇಕಂತೆ!"

255. ಶರಣರ ಪಾದದ ತೊಡುಗೆ ಮಾಡು

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ;
ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ;
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ,
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹಯ್ಯಾ
ಲಿಂಗದೇವಯ್ಯಾ. -ಬ.ವ.ದೀ.253

ಸಾತ್ಮ ಶುದ್ಧೀಕರಣ (Self - purgation) ಸಾಧಕನ ಬಹುಮುಖ್ಯ ಲಕ್ಷಣ. ಸಾಮಾನ್ಯ ಲೌಕಿಕರು ತಮ್ಮನ್ನು ತಾವು ತಿದ್ದಿಕೊಳ್ಳದೆ ಇತರರ ಲೋಪ -ದೋಷಗಳನ್ನೇ ಎತ್ತಿ ಆಡುತ್ತಾರೆ. ಅಧ್ಯಾತ್ಮ ಸಾಧಕರು ತಮ್ಮ ಅಂತರಂಗವನ್ನು ಶೋಧಿಸುವುದರಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಾರೆ. ಈ ವಚನದಲ್ಲಿ ಗುರು ಬಸವಣ್ಣನವರು ಲಿಂಗದೇವನಿಗೆ ತೊಡುಗೆಯಾಗುವುದಕ್ಕಿಂತ ಮೊದಲು ಶರಣರಿಗೆ ತೊಡುಗೆಯಾಗಲು ಆಸಕ್ತಿ ತೋರಿದ್ದಾರೆ. ಏಕೆಂದರೆ ಶರಣರ ಪ್ರಮಾಣ ಪತ್ರ ಸಿಕ್ಕ ಮೇಲೆಯೇ ದೇವರ ರಾಜ್ಯದೊಳಕ್ಕೆ ಪ್ರವೇಶ ಲಭ್ಯ. ಮೊದಲು ಆಭರಣವನ್ನು ಕರಗಿಸಿ, ಚಿನ್ನದ ಗಟ್ಟಿ ಸಿದ್ಧಪಡಿಸುತ್ತಾರೆ. ಶುದ್ಧ ಚಿನ್ನವಾಗುವವರೆಗೂ ಪುಟಕ್ಕಿಕ್ಕುತ್ತಾರೆ. ಆ ಮೇಲೆ ಗಟ್ಟಿಗೆ ಪೆಟ್ಟು ಕೊಟ್ಟು ಆಭರಣವಾಗಿ ರೂಪುಗೊಳಿಸುತ್ತಾರೆ. ಹಾಗೆಯೇ ಮನಸ್ಸು ಹಲವಾರು ಬಗೆಯ ಕಲ್ಮಶಗಳಿಂದ ತುಂಬಿರುತ್ತದೆ. ಅದನ್ನು ಪುಟಕ್ಕಿಟ್ಟ ಚಿನ್ನದಂತೆ ಶುದ್ಧ ಮನಸ್ಸನ್ನಾಗಿ ಮಾಡಬೇಕು; ನಂತರ ಅದನ್ನು ದೈವೀಕರಿಸಬೇಕು. ಆಗ ಅದು ಶರಣರಿಗೆ ಮೆಚ್ಚುಗೆಯಾಗುವ ಆಭರಣವಾಗುತ್ತದೆ.

ಗುರು ಬಸವಣ್ಣನವರಿಗೆ ತಲೆಯ ಮೇಲಿನ ಕಿರೀಟವಾಗುವ ಹಂಬವಿಲ್ಲ; ಪಾದವನ್ನು ಅಲಂಕರಿಸುವ ಪಾದಕಡಗವಾಗುವ ಅಭೀಪ್ಸೆ ಇದೆ.

256. ವಾಕ್ ಶುದ್ಧಿ ಅಗತ್ಯ

ವಚನ ಪಾತಕವೆನ್ನ ವಚನದೋಷಂಗಳೆನ್ನ
ಕಾಡಿ ಕಾಡಿ ಕೆಡಿಸಿಹವೆನ್ನ ಲಿಂಗದೇವಾ,
ಅಹಂ ಎಂಬ ಅಹಂಕಾರವೆನ್ನ!
-ಬ.ವ.ದೀ.254

ಮಾತಿನಿಂದ ಪಾತಕಗಳು (Sins) ಸಂಭವಿಸುವ ಸಾಧ್ಯತೆ ಇದೆ; ಮಾತಿನಲ್ಲಿ ದೋಷವು ಸಂಭವಿಸುವ ಸಾಧ್ಯತೆ ಇದೆ. ಯಾವುದಾದರೂ ವ್ಯಕ್ತಿ ಅಪಮಾನವಾಗುವಂತಹ ನಿಂದೆ, ಬೈಗುಳ, ಘಟನೆ ನಡೆದರೆ ಆ ಅವಮಾನ ತಾಳಲಾರದೆ ಆ ವ್ಯಕ್ತಿ ಪ್ರಾಣ ಕಳೆದುಕೊಳ್ಳಬಹುದು, ಊರು ಬಿಟ್ಟು ಮನೆ ಬಿಟ್ಟು ಹೋಗಬಹುದು. ಆದ್ದರಿಂದ ಮಾತನಾಡುವಾಗ ತುಂಬಾ ಎಚ್ಚರಿಕೆ ವಹಿಸಬೇಕು. ಮಾತನಾಡುವಾಗ ಭಾಷಾ ಅಶುದ್ಧಿ, ಬೈಗುಳಗಳು ಮುಂತಾದವು ನುಸುಳಬಹುದು. ಮಾತು ಕೊಟ್ಟು ತಪ್ಪುವುದು ವಚನದ ದೋಷ. ದುಡುಕಿ ಮಾತನಾಡಿ ನಂತರ ಪಶ್ಚಾತ್ತಾಪ ಪಡುವುದು ವಚನದ ದೋಷ. ಇವು ಪುನಃ ಪುನಃ ಕಾಡುತ್ತ ವ್ಯಕ್ತಿಯನ್ನು ವಿನಾಶದತ್ತ ಕೊಂಡೊಯ್ಯುತ್ತವೆ. ಇವನ್ನು ತಿದ್ದಿಕೋ ಎಂದು ಗುರು ಹಿರಿಯರು ಹೇಳಿದರೆ ಆ ಬುದ್ಧಿವಾದವನ್ನು ಅನೇಕರು ಸ್ವೀಕರಿಸುವುದಿಲ್ಲ, ಏಕೆಂದರೆ "ಅಹಂ", "ನಾನು ಬಹಳ ತಿಳಿದವನು, ಪರಿಪೂರ್ಣನು ಎಂಬ ಹಮ್ಮು" ಕಾಡುತ್ತದೆ.

257. ವಾಕ್ ಶುದ್ಧಿ ಅಗತ್ಯ

ಅವರಿವರೆನ್ನದೆ ಚರಣಕ್ಕೆರಗಲು ಅಯ್ಯತನವೇರಿ
ಬೆಬ್ಬನೆ ಬಿರಿವೆ ನಾನು; ಕೆಚ್ಚು ಬೆಳೆಯಿತ್ತಯ್ಯಾ!
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ
ಬೆಳುಗಾರದಂತೆ ಮಾಡು ಲಿಂಗದೇವಾ -ಬ.ವ.ದೀ.255

ಇನ್ನೊಬ್ಬರನ್ನು ಉದ್ದೇಶಿಸಿ ಹಿತೋಪದೇಶ ಮಾಡುವ ಬದಲು ತಮ್ಮ ಮೇಲೆಯೇ ಹಾಕಿಕೊಂಡು ಮಾತನಾಡುವುದು ಧರ್ಮಪಿತ ಬಸವಣ್ಣನವರ ಶೈಲಿ. ಅವರು ಕೇವಲ ತತ್ವಜ್ಞಾನಿಗಳಷ್ಟೇ ಅಲ್ಲ ಪ್ರಯೋಗಶೀಲ ಸಾಮಾಜಿಕ ವಿಜ್ಞಾನಿ, ನವ ಸಮಾಜ ನಿರ್ಮಾಪಕರು ಜಾತಿ ವರ್ಣ ವರ್ಗ ರಹಿತ ಧರ್ಮ ಸಹಿತ ಶರಣ ಸಮಾಜವನ್ನು ಅವರು ಕಟ್ಟುವಲ್ಲಿ ಯಶಸ್ವಿಯಾದರು. ಬಸವಣ್ಣನವರು ನವ ಸಮಾಜ ನಿರ್ಮಾಣದ ಪ್ರಮುಖ ಶಿಲ್ಪಿಯಾದರೆ ಅವರು ತಯಾರು ಮಾಡಿದ ಜಂಗಮರು ಸ್ವಯಂ ಸೇವಕ ಕಾರ್ಯಕರ್ತರು. ವ್ಯಕ್ತಿಗಳ ಜೀವನದಲ್ಲಿ ಹುಟ್ಟು - ಸಾವು, ಮದುವೆ - ದೀಕ್ಷೆ ಇವೆಲ್ಲ ಸಹಜ ಕ್ರಿಯೆಗಳು. ಇವನ್ನು ನಿರ್ವಹಿಸುವ ಪುರೋಹಿತರು ಅತ್ಯಗತ್ಯ. ಇಂಥ ಕ್ರಿಯಾ ಮೂರ್ತಿಗಳನ್ನು ಶರಣ ಸಮೂಹದಲ್ಲಿ ತಯಾರು ಮಾಡಿ, ಧಾರ್ಮಿಕ ವಿಧಿವಿಧಾನ ನಿರ್ವಹಿಸಲು ಅವರನ್ನು ಉಜ್ಜುಗಿಸಿದರು. ಅವರಿಗೆ ಅನುಯಾಯಿಗಳು ಗೌರವ ಕೊಡುವುದು ಸಹಜ. ಹೀಗಾಗ ಅನುಯಾಯಿಗಳು "ಅಯ್ಯನವರೇ" ಎಂದು ಗೌರವಿಸುತ್ತ, ಪಾದಕ್ಕೆ ನಮಸ್ಕರಿಸುತ್ತಿದ್ದರು. ಸ್ವಲ್ಪೇ ಕಾಲದಲ್ಲಿ ಅಂಥ ಕೆಲವು ಕ್ರಿಯಾಮೂರ್ತಿಗಳಲ್ಲಿ ಅಯ್ಯ ತನದ ಅಹಂಕಾರ ತಲೆದೋರಿ ಬೆಬ್ಬನೆ ತಾವು ಶ್ರೇಷ್ಠರೆಂದು ಬೀಗ ತೊಡಗಿದರು. ಅವರಲ್ಲಿ ತಾವು ಇತರರಿಗಿಂತ ಶ್ರೇಷ್ಠರೆಂಬ ಮೇಲರಿಮೆಯ ಕೆಚ್ಚು ಬೆಳೆಯಲಾರಂಭಿಸಿತು. ಅಂಥ ಅಹಂಕಾರದ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ವಿನಯಶಾಲಿಯನ್ನಾಗಿ ಮಾಡು ಎಂದು ಲಿಂಗದೇವನಲ್ಲಿ ಗುರು ಬಸವಣ್ಣನವರು ಬೇಡುತ್ತಾರೆ.

ಜಂಗಮ -ಒಂದು ತತ್ವ, ಒಂದು ನಿಲುವು. ಇದು ಜಾತಿಯಾಗಿ ವಿಕೃತಗೊಳ್ಳಲು ಕಾರಣವನ್ನು ಹುಡುಕಿದರೆ ನನಗೆ ಹೀಗನ್ನಿಸುತ್ತದೆ. ಒಂದು ಊರಿನಲ್ಲಿ ಜನರನ್ನು ದೀಕ್ಷಾವಂತರನ್ನಾಗಿ ಮಾಡಿದ ಮೇಲೆ ಅವರ ಮನೆಗಳಲ್ಲಿ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲು ಯಾರಾದರೊಬ್ಬರನ್ನು ಜಂಗಮರನ್ನಾಗಿ ಆಯ್ಕೆ ಮಾಡಲಾಗುತ್ತಿತ್ತು. ಈ ಆಯ್ಕೆ ಅರ್ಹತೆಯ ಆಧಾರದ ಮೇಲೆ ಸಾಗುತ್ತಿತ್ತು. ಒಂದು ಊರಿನ ಜಂಗಮ (ಕ್ರಿಯಾಮೂರ್ತಿಯ) ಕುಟುಂಬದವರು ಇನ್ನೊಂದು ಊರಿನ ಕ್ರಿಯಾ ಮೂರ್ತಿಯವರ ಕುಟುಂಬದೊಡನೆ ವಿವಾಹಾದಿ ವ್ಯವಹಾರ ಮಾಡತೊಡಗಿದ್ದರಿಂದ ಜಂಗಮ ಜಾತಿ ಸೃಷ್ಟಿಯಾಯಿತು.

ಮೇಲಿನ ವಚನದಲ್ಲಿ ಬೆಳ್ಳುಕ, ಬೆಳುಗಾರ ಎಂಬ ಪದಗಳಿವೆ. ಬೆಳುಗಾರಕ್ಕೆ ಬೆಸುಗೆಗಾಗಿ ಉಪಯೋಗಿಸುವ ಒಂದು ಪದಾರ್ಥ ಎಂದಿದೆ. ಬೆಳ್ಳಾರಕ್ಕೆ ಬಿಳಿಯ ಮುತ್ತಿನಹಾರ ಎಂಬ ಅರ್ಥವಿದೆ. ಆದ್ದರಿಂದ ಬಿಳಿಯ ಮುತ್ತಿನ ಹಾರದಂತೆ ನನ್ನನ್ನು ರೂಪುಗೊಳಿಸು ಎಂದಿದ್ದಾರೆ ಎಂದು ನಾವು ಅರ್ಥವಿಸಬಹುದು.

ಎಷ್ಟೇ ಗೌರವ, ಕೀರ್ತಿ ಬಂದರೂ ವ್ಯಕ್ತಿಯು ಮೇಲರಿಮೆಯಿಂದ ಬೀಗದೆ ವಿನಯದಿಂದ ಎಲ್ಲರೊಡನೆ ನಡೆದುಕೊಳ್ಳಬೇಕು ಎಂಬುದೇ ಈ ವಚನದಲ್ಲಿ ಇರುವ ಸಂದೇಶ.

258. ಸೇವಕ - ಮಾಲಿಕ ಸಂಬಂಧ

ನಡೆಯೆ ಕಂಡಾ ನಂಬಿ, ನುಡಿಯಲ್ಲಿ ಉಪಚಾರ!
ಮಿಗಿಲೊಂದು ಮಾತು ಬಂದಡೆ ಸೈರಿಸಲಾರೆನು
ತುಯ್ಯಲಾದಡೆ ಉಂಬೆ; ಹುಯ್ಯಲಾದಡೆ ಓಡುವೆ!
ಆಳು ಬೇಡಿದಡೆ ಆಳ್ದನೇನನೀಯನಯ್ಯಾ!
ಆಳಾಗಿ ಹೊಕ್ಕು ಅರಸಾಗಿ ನಡೆದಡೆ
ಆಳಿಗೊಂಡಿತ್ತೆನ್ನ ಲಿಂಗದೇವನ ಭಕ್ತಿ -ಬ.ವ.ದೀ.256

ಈ ವಚನದಲ್ಲಿ ಒಡೆಯನೊಡನೆ ಸೇವಕನ ಸಂಬಂಧ ಹೇಗಿರಬೇಕು ಎಂಬ ಬಗ್ಗೆ ಬೋಧೆ ಇದೆ. ಇದನ್ನು ಸಹ ತಮಗೆ ಅನ್ವಯಿಸಿಕೊಂಡು ಗುರು ಬಸವಣ್ಣನವರು ಹೇಳುತ್ತಾರೆ.

ಒಡೆಯನೊಡನೆ, ಅವನಲ್ಲಿ ನಂಬಿಕೆ ಇಟ್ಟು ನಡೆಯುವುದಿಲ್ಲ, ಮಾತಿನಲ್ಲಿ ಮಾತ್ರ ವಿನಯದ ಮಾತು, ಉಪಚಾರದ ನಟನೆ. ತಪ್ಪು ಮಾಡಿದಾಗ ಏನಾದರೊಂದು ಮಾತು ಬೈದರೆ ಸೈರಿಸುವ ಸಹನೆ ಇಲ್ಲ. ಎಲ್ಲಿಯವರೆಗೂ ಮಾಲಿಕನ ಬಳಿ ಸುಖ ಸಂಪತ್ತು, ಹಾಲು ಖೀರು ಇರುವುದೋ ಅಲ್ಲಿಯವರೆಗೆ ಸೇವೆ, ಸ್ವಲ್ಪ ಸಂಕಷ್ಟ ಎರಗಿದರೆ ಸೇವೆ ಬಿಟ್ಟು ಓಡಿಹೋಗುವಿಕೆ! ಇದೆಂತಹ ನಂಬಿಕೆ, ಇದೆಂತಹ ನಿಯತ್ತು?!

ಒಬ್ಬ ವ್ಯಕ್ತಿ ಕಷ್ಟ ಸುಖಗಳೆರಡರಲ್ಲಿ, ನೋವು - ನಲಿವಿನಲ್ಲಿ ಎಡಬಿಡದೆ ಮಾಲಿಕನ ಸೇವೆ ಮಾಡಿದರೆ ಅವನ ನಿಷ್ಠೆಗಾಗಿ ಮಾಲಿಕನು ಸೇವಕನು ಕೇಳಿದ್ದೆಲ್ಲವನ್ನು ಕೊಡುತ್ತಾನೆ. ಹಾಗೆ ಮಾಡವೆ, ಆಳಾಗಿ ಪ್ರವೇಶಿಸಿ ಮಾಲಿಕನು ವಿಶ್ವಾಸವಿಟ್ಟು ಅಧಿಕಾರವನ್ನು ಕೊಟ್ಟಾಗ ದರ್ಪದಿಂದ ಎಲ್ಲರ ಮೇಲೆ ಅಧಿಕಾರವನ್ನು ಚಲಾಯಿಸತೊಡಗಿದರೆ ಆಗ ಸೇವಕನ ನಿಯತ್ತಿಗೆ ಚ್ಯುತಿ ಬರುತ್ತದೆ.

259. ಶರಣರೊಡನೆ ಮುನಿಸು ಬೇಡ

ಇರಿಸಿಕೊಂಡು ಭಕ್ತರಾದರೆಮ್ಮವರು
ತರಿಸಿಕೊಂಡು ಭಕ್ತರಾದರೆಮ್ಮವರು
ಕೊರೆಸಿಕೊಂಡು ಭಕ್ತರಾದರೆಮ್ಮವರು
ಜರಿಸಿಕೊಂಡು ಭಕ್ತರಾದರೆಮ್ಮವರು
ಲಿಂಗದೇವನ ಶರಣರಿಗೆ ಮುಳಿಸು ತಾಳಿ
ಎನ್ನ ಭಕ್ತಿ ಅರೆಯಾಯಿತ್ತು! -ಬ.ವ.ದೀ.257

ಮಾಲಿಕ -ಸೇವಕ, ಗುರು -ಶಿಷ್ಯ, ಜಂಗಮ -ಭಕ್ತ, ಶರಣ -ಇನ್ನೊಬ್ಬ ಶರಣ: ಇವರ ನಡುವಿನ ಸಂಬಂಧ ಕುರಿತು ಹೇಳಿರಬೇಕೆಂದು ನಾವು ನಿರ್ಣಯಿಸಬಹುದು. ವ್ಯಕ್ತಿಯು ಸ್ವಾಭಾವಿಕವಾಗಿ ಸಮಾಜ ಜೀವಿ. ಆದರೆ ಸಣ್ಣ ಸಣ್ಣದಕ್ಕೂ ಮುನಿಸಿಕೊಳ್ಳುವನು, ಸಮೂಹವನ್ನು ತೊರೆಯುವನು. ಹಾಗೆ ಮಾಡಬಾರದು. ಮಾಲಿಕನು ಪ್ರೀತಿಯಿಂದಲೇ ಸೇವಕನಿಗೆ ಗದರುವನು. ಗುರುವು ಜ್ಞಾನ ಕೊಡುವ ವ್ಯಕ್ತಿ. ಶಿಷ್ಯನು ತಪ್ಪು ಮಾಡಿದಾಗ ಬೈಯುವನು. ಶಿಷ್ಯನು ತಪ್ಪನ್ನು ತಿದ್ದಿಕೊಳ್ಳಬೇಕೇ ಹೊರತು ಮುನಿಸು ತಾಳಬಾರದು. ಶರಣ ಸಂಗಮದಲ್ಲಿ ಸೇರಿ ಅನುಭವ ಗೋಷ್ಠಿಯಲ್ಲಿ ಶರಣನು ಭಾಗವಹಿಸುತ್ತಾನೆ ಎಂದುಕೊಳ್ಳಿರಿ. ಅವನಲ್ಲಿ ಏನೋ ಲೋಪ ದೋಷಗಳಿರುತ್ತವೆ ಎಂದುಕೊಳ್ಳೋಣ. ಆಗ ತತ್ವನಿಷ್ಠರಾದ ಶರಣರು ವೈಯಕ್ತಿಕ ದೋಷವೇ ಇರಲಿ ಅದನ್ನು ಎತ್ತಿ ತೋರಿಸಿ ತಿದ್ದಲು ಯತ್ನಿಸುತ್ತಾರೆ. ಆಗ ಆ ಹಿತೋಪದೇಶವನ್ನು ಅಕ್ಕರೆಯಿಂದ ಸ್ವೀಕರಿಸಿ ವ್ಯಕ್ತಿಯು ತಿದ್ದಿಕೊಳ್ಳಲು ಯತ್ನಿಸಬೇಕೇ ವಿನಾ ಧರ್ಮಬಂಧುವಾದ ಶರಣರಲ್ಲಿ ಮುನಿಸು ತಾಳಬಾರದು. ಹಾಗೆ ಮುನಿಸು ತಾಳಿ ಶರಣರ ಸಂಗ (ಸಂಘ)ವನ್ನು ತೊರೆದು ದೂರಹೋದರೆ ಆಗ ಲಿಂಗದೇವನ ಅವಕೃಪೆಗೆ ಪಾತ್ರರಾಗಬೇಕಾದೀತು. ಭಕ್ತಿಯು ಅರಕಳಿಯಾಗಿ ಬಿಡುತ್ತದೆ.

260. ಪ್ರತಿಷ್ಠೆಯ ಹೋರಾಟ ಬೇಡ

ಮನಕ್ಕೆ ನಾಚದ ವಚನ; ವಚನಕ್ಕೆ ನಾಚದ ಮನ!
ಕುಂದು - ಹೆಚ್ಚ ನುಡಿವೆ,
ಒಂದು ಮಾತಿನ ಗೆಲ್ಲ ಸೋಲಕ್ಕೆ ಹಿಡಿದು ಹೋರುವೆ;
ಲಿಂಗದೇವನ ಶರಣರೆನ್ನಾಳ್ದರೆಂಬೆ -ಬ.ವ.ದೀ.258

ಮನಸ್ಸಿಗೂ ಮಾತಿಗೂ ಅವಿನಾಭಾವ ಸಂಬಂಧವಿದೆ. ನಾಲಿಗೆಯಿಂದ ಹೊರಬರುವ ಮಾತು ಎಂಬ ಮುತ್ತು ಸಿದ್ಧವಾಗುವುದು ಮನಸ್ಸು ಎಂಬ ಕಪ್ಪೆ ಚಿಪ್ಪಿನಲ್ಲಿ. ಮೂರ್ಖರು ಮೊದಲು ಮಾತನಾಡಿ ನಂತರ ಚಿಂತನೆ ಮಾಡುತ್ತಾರೆ, ವಿವೇಕಿಗಳು ಮೊದಲು ಚಿಂತನೆ ಮಾಡಿ ನಂತರ ಮಾತನಾಡುತ್ತಾರೆ. ತಾನಾಡುವ ಮಾತಿನ ಪರಿಣಾಮ ಇತರರ ಮೇಲೆ ಏನಾಗುತ್ತದೆ ಎಂಬುದನ್ನು ವಿಚಾರ ಮಾಡಿ ಜ್ಞಾನಿಗಳು ಮಾತನಾಡುತ್ತಾರೆ. ಒಂದು ವೇಳೆ ವಿವೇಚಿಸುವ ಮನದ ಕೈಯಿಂದ

ತಪ್ಪಿಸಿಕೊಂಡು ಏನಾದರೂ ಮಾತುಗಳು ಅವಿವೇಕತನದಿಂದ ಹೊರಬಂದರೆ ಆಗ ವಿವೇಕಿಗಳಾದ ಶರಣರು ಕ್ಷಮೆ ಕೇಳಿಕೊಂಡು, ತಿದ್ದಿಕೊಳ್ಳಬೇಕು.

ಸಮಯಕ್ಕೆ ಸರಿಯಾಗಿ ವಿವೇಕ ಜ್ಞಾನದಿಂದ ನುಡಿಯುವುದೂ ಒಂದು ಕಲೆ. ಬಹಳ ಜನರಿಗೆ ಅದು ಬರದು. ಇಲ್ಲ ಕುಂದಾಗಿಯಾದರೂ ನುಡಿಯುವರು. ಹೆಚ್ಚಾಗಿಯಾದರೂ ಅನವಶ್ಯಕವಾಗಿ ಮಾತನಾಡುವರು. ನಂತರ ದುಡುಕಿ ಮಾತನಾಡಿ ಅದೇ ಸರಿ ಎಂದು ಪ್ರತಿಷ್ಠೆಗಾಗಿ ವಾದ ಮಾಡುವರು. ಮತ್ತೆ ಉಪಚಾರಕ್ಕಾಗಿ ಶರಣರು ದೊಡ್ಡವರು, ಅವರ ಎದುರು ಉದ್ಧಟತನದಿಂದ ಮಾತನಾಡಬಾರದು ಎಂದು ಹೇಳುವುದನ್ನೂ ಇವರು ಬಿಡರು. ಆದ್ದರಿಂದ ಪ್ರತಿಷ್ಠೆಗಾಗಿ ತನ್ನ ಮಾತನ್ನು ಹೆಚ್ಚು ಮಾಡಲಿಕ್ಕೆ ಹೋರಾಡುವುದು ಶರಣನ ಲಕ್ಷಣವಲ್ಲ.

ಇಲ್ಲಿ ನಾವು ಛಲ ಮತ್ತು ಹಠದ ಮಧ್ಯೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ಜ್ಞಾನಿಗಳು, ಸಮಾಜ ಸುಧಾರಕರು ಒಂದು ತತ್ವ ಸಿದ್ಧಾಂತವನ್ನು ನಂಬಿ ಅದರ ಪ್ರತಿಷ್ಠಾಪನೆಗಾಗಿ ಎಷ್ಟೇ ವಿರೋಧ, ಎಡರು ತೊಡರು ಬಂದರೂ ಹೋರಾಡುತ್ತಾರೆ. ಅದು ಛಲ, ಬುದ್ಧಿಪೂರ್ವಕ ಸಂಕಲ್ಪದಿಂದ ಕೂಡಿರುತ್ತದೆ. ಹಠದ ಹಿಂದೆ ಯಾವುದೇ ಸಿದ್ಧಾಂತ ಇರುವುದಿಲ್ಲ. ವೈಯಕ್ತಿಕ ಪ್ರತಿಷ್ಠೆ ಮತ್ತು ಹಮ್ಮು ಪ್ರಧಾನವಾಗಿ ಇರುತ್ತದೆ. ಹಠದ ಹಿಂದೆ ಅಜ್ಞಾನ ಮತ್ತು ಅಪಕ್ವತೆ ಇರುತ್ತದೆ.

261. ಭಕ್ತಿಯಿಲ್ಲದ ಬಡವ

ಇಲ್ಲವೆಯ ಮೇಲೆ ಕಂಚೊಡೆದಂತೆ ಬಡ ಮನವೆನ್ನ ಕಾಡಿತ್ತಯ್ಯಾ
ಮತಿಯಿಲ್ಲದ ಮರುಳ ನಾನಯ್ಯಾ
ಭಕ್ತಿಯಿಲ್ಲದ ಬಡವ ನಾನು
ನಿಮ್ಮ ನೆನಹವಿಲ್ಲದೆ ನಿರ್ಭಾಗ್ಯನಾದೆ
ಎನಗೇ ನೀ ಕರುಣಿಸಾ ಲಿಂಗದೇವಾ. -ಬ.ವ.ದೀ.259

ಏನೂ ಇಲ್ಲದಿರುವ ಶೂನ್ಯದಲ್ಲಿ ಅರ್ಥಾತ್ ಗಾಳಿಯಲ್ಲಿ ಕಂಚಿನ ವಸ್ತುವನ್ನು ಅಲ್ಲಾಡಿಸಿದರೆ ನಾದವು ಉತ್ಪತ್ತಿಯಾಗುವುದೆ? ಅದು ವ್ಯರ್ಥ ಶ್ರಮ. ಅದೇ ರೀತಿ ನನ್ನ ಮನಸ್ಸು ಭಕ್ತಿಯಿಲ್ಲದ, ದೃಢತೆಯಿಲ್ಲದ ಬಡಮನ. ವಿವೇಕ ಜ್ಞಾನವಿಲ್ಲದ ಮರುಳು ಮನುಷ್ಯ ನಾನು. ಭಕ್ತಿ ಎಂಬ ಸಂಪತ್ತು ಇಲ್ಲದ ಬಡವನು. ಹೀಗಾಗಿ ಈ ಬಡ ಮನವು ಲಿಂಗದೇವಾ, ನಿಮ್ಮ ನೆನಹನ್ನು ಅಳವಡಿಸಿಕೊಳ್ಳಲು ಅಸಮರ್ಥವಾಗಿದೆ. ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನೀನು ಒಲಿಯುವುದೇ ಸೂಕ್ತ.

262. ಶರಣರಿಗೆ ಶರಣಾಗುವುದೇ ಉಪಾಯ

ಲಿಂಗವ ನಚ್ಚದೀ ಮನವು, ಜಂಗಮವ ನಂಬದೀ ಮನವು,
ಕೂಪರ ಕಂಡಡೆ ಒಲ್ಲದೀ ಮನವು
ಈ ಮನದ ಭ್ರಮೆಯನೆಲ್ಲವ ಮರೆಸಿ
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು
ಲಿಂಗದೇವಾ -ಬ.ವ.ದೀ.260

ಸೃಷ್ಟಿಕರ್ತ ಲಿಂಗದೇವನ ಅಸ್ತಿತ್ವದಲ್ಲಿ, ಅನುಗ್ರಹದಲ್ಲಿ ದೃಢವಾದ ನಂಬಿಕೆ ಇಡದೆ ಈ ಮನಸ್ಸು ಹೊಯ್ದಾಡುತ್ತದೆ. ಲಿಂಗದೇವನ ಕುರುಹಾದ ಇಷ್ಟಲಿಂಗದ ಮೂಲಕ ಏನೆಲ್ಲ ಸಿದ್ಧಿಯನ್ನು ಪಡೆಯಬಹುದು, ದಿವ್ಯಾನುಭವವನ್ನು ಪಡೆಯಬಹುದು. ಅದರಲ್ಲಿ ವಿಶ್ವಾಸವನ್ನಿಡದೆ ಅತ್ತಿತ್ತ ಹರಿದಾಡುತ್ತದೆ. ದೇವನ ಪ್ರತಿನಿಧಿಯಾದ ಜಂಗಮನು ಬಂದರೆ ಅವನನ್ನು ನಂಬದೆ ಈತ ಮೋಸಗಾರನಿರಬಹುದೆ? ವಂಚಕ ಅಥವಾ ಸ್ವಾರ್ಥಿ ಇರಬಹುದೆ ಎಂದು ಏನೇನೋ ಸಂಶಯ ತಾಳುತ್ತದೆ. ಪ್ರೀತಿಸುವವರನ್ನು ಕಂಡರೆ ವಿಶ್ವಾಸವನ್ನಿಡದು. ಎಂಥಾ ಕೆಟ್ಟಗುಣ ಈ ಮನಸ್ಸಿನದು! ಇಂಥ ಕೆಟ್ಟ ಗುಣದ ಭ್ರಮೆಯನ್ನು ಮರೆಸಿ ಶರಣ ಬಂಧುಗಳನ್ನು ನಂಬಲಿಕ್ಕೆ ಅವರನ್ನು ಗೌರವಿಸಲಿಕ್ಕೆ ಅವರಿಗೆ ಶರಣಾಗಿ ಅವರಿಂದ ಸೂಕ್ತ ಮಾರ್ಗದರ್ಶನ ಪಡೆಯುವಂತೆ ಲಿಂಗದೇವಾ ಅನುಗ್ರಹಿಸು.

ಮಾನವರಲ್ಲಿರುವ ಹಲವು ದೌರ್ಬಲ್ಯಗಳಲ್ಲಿ ಅವಿಶ್ವಾಸ ಮಾಡುವುದೂ ಒಂದು ದೌರ್ಬಲ್ಯ. ನಂಬದಿದ್ದರೆ ಜ್ಞಾನವಾಗಲಿ, ಸ್ನೇಹವಾಗಲಿ, ಪ್ರೀತಿಯಾಗಲಿ ಲಭ್ಯವಾಗದು.

263. ವಿಕಾರಿಯ ಅತಂತ್ರ ಸ್ಥಿತಿ

ಅಶನ ಕುಂದದು, ವ್ಯಸನ ಮಾಣದು
ಆರತವಡಗದು ಬೆವಹಾರವುಡುಗದು.
ಮಜ್ಜನಕ್ಕೆರೆವೆನಯ್ಯಾ; ಕಾಯವಿಕಾರಿಯಾನು.
ಮಜ್ಜನಕ್ಕೆರೆವೆನಯ್ಯಾ; ಜೀವವಿಕಾರಿಯಾನು.
ಮಜ್ಜನಕ್ಕೆರೆವೆನಯ್ಯಾ; ಶರಣನಲ್ಲ, ಲಿಂಗೈಕ್ಯನಲ್ಲ!
ಲಿಂಗದೇವರಲ್ಲಿ ಅಂತರ ಬೆಂತರ ನಾನಯ್ಯ -ಬ.ವ.ದೀ.261

ಹೊಟ್ಟೆಯ ಹಸಿವೆಗಾಗಿ ಮಾಡುವ ಭೋಜನ ಅಶನ. ಮನುಷ್ಯ ಹಸಿವೆಯ ತೃಪ್ತಿಗಾಗಿ ತಿನ್ನುವುದು ತಪ್ಪಲ್ಲ. ಅದು ಜೀವನಾವಶ್ಯಕತೆ. ವ್ಯಕ್ತಿ ಅಗತ್ಯವಿದ್ದಷ್ಟು ತಿಂದು ಸಮಾಧಾನದಿಂದ ಇರುವುದಿಲ್ಲ. ಆವಶ್ಯಕತೆಗಿಂತ ಹೆಚ್ಚಾಗಿ ಆಸೆಗಾಗಿ ತಿಂದು ಆರೋಗ್ಯವನ್ನು ಕೆಡಿಸಿಕೊಳ್ಳುವನು. ನಂತರ ವ್ಯಸನಗಳಿಗೆ ಬಲಿಯಾಗಿ ಕುಡಿತ, ಜೂಜು, ಧೂಮಪಾನ, ವ್ಯಭಿಚಾರ ಮುಂತಾದ ಕೆಟ್ಟ ಅಭ್ಯಾಸಗಳನ್ನು ರೂಢಿಸಿಕೊಳ್ಳುವನು. ಆರತ - ಎಲ್ಲದರಲ್ಲೂ ಅತಿಯಾದ ಆಸೆಯನ್ನು ಬೆಳೆಸಿ ಕೊಳ್ಳುವನು. ಎಷ್ಟು ಗಳಿಸಿದರೂ ತೃಪ್ತಿಯಿಲ್ಲ. ಇನ್ನೂ ಗಳಿಸಬೇಕೆಂದು ಊಟ ನಿದ್ರೆಯಿಲ್ಲದ ದುಡಿಯುವನು. ಬೆವಹಾರದಲ್ಲಿ ನಿರತನಾಗಿ ಬೇರೆ ಏನಕ್ಕೂ ಸಮಯ ಕೊಡನು. ಪೂಜೆಗಾಗಲಿ, ಶರಣರ ಸತ್ಸಂಗಕ್ಕಾಗಲಿ, ಗುರು ದರ್ಶನಕ್ಕಾಗಲಿ ಅವನಿಗೆ ವೇಳೆ ಇರದಷ್ಟು ವ್ಯವಹಾರವನ್ನು ಬೆಳೆಸಿಕೊಳ್ಳುವನು.

ಕಾಯ ವಿಕಾರಗಳಾದ ಹಸಿವು, ತೃಷೆ, ನಿದ್ರೆಗಳನ್ನು ನಿಗ್ರಹಿಸದೆ, ಜೀವ ವಿಕಾರಗಳಾದ ವಿಷಯಾಸಕ್ತಿ, ಮೈಥುನಾಪೇಕ್ಷೆ, ಬಯಕೆಗಳನ್ನು ನಿಯಂತ್ರಿಸದೆ ಯಾಂತ್ರಿಕವಾಗಿ ನಿತ್ಯನೇಮವೆಂದು ಇಷ್ಟಲಿಂಗಕ್ಕೆ ಮಜ್ಜನಕ್ಕೆರೆಯುತ್ತಾನೆ; ಪ್ರಯೋಜನವೇನು? ಶರಣ ಸ್ಥಲ, ಐಕ್ಯ ಸ್ಥಲಕ್ಕೆ ಏರದೆ ಸಾಧನೆಯಲ್ಲಿ ಮುಂದೆ ಸಾಗದೆ ಇಂಥ ಸಾಧಕನು ಅಂತರ್ ಪಿಶಾಚಿಯಂತೆ ಅತ್ತಲೂ ಇಲ್ಲದೆ ಇತ್ತಲೂ ಇಲ್ಲದೆ ಅಲೆದಾಡುವನು.

264. ಲಿಂಗದೇವನಲ್ಲಿ ಶರಣಾಗತಿ

ಕುದುರನೇಸು ತೊಳೆದಡೆಯೂ ಕೆಸರು ಮಾಬುದೆ?
ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು ಕೃಪೆಯ ಮಾಡಯ್ಯಾ
ಕಂಬಳಿಯಲ್ಲಿ ಕಣಕವ ನಾದಿದಂತೆ, ಕಾಣಿರೇ, ಎನ್ನ ಮನ!
ಲಿಂಗದೇವಾ, ನಿಮಗೆ ಶರಣೆಂದು ಶುದ್ಧ ಕಾಣಯ್ಯಾ. -ಬ.ವ.ದೀ.262

ಕುದುರನ್ನು ಅಂದರೆ ಮಣ್ಣಿನ ಗೋಡೆಯನ್ನು ನೀರಿನಲ್ಲಿ ತೊಳೆಯ ಹೋದರೆ ಅದು ನಿರಂತರವಾಗಿ ಕೆಸರನ್ನು ಬಿಡುತ್ತಾ ಹೋಗುವುದಲ್ಲದೆ ಗಟ್ಟಿಯಾಗುವುದಿಲ್ಲ. ಹಾಗೆ ಕೆಲವರ ಮನಸ್ಸು, ಅದನ್ನು ಎಷ್ಟು ಗಟ್ಟಿಗೊಳಿಸಲು ಪ್ರಯತ್ನಿಸಿದರೂ ದೃಢವಾಗುವುದಿಲ್ಲ. ಅವರ ದೇಹ ಮನಸ್ಸುಗಳಲ್ಲಿರುವ ಅವಗುಣಗಳು ಹಾಗೆಯೇ ಉಳಿಯುತ್ತವೆ. ದುರ್ಬಲ ಮನಸ್ಸಿನವರ ಪ್ರಯತ್ನ ಕಂಬಳಿಯಲ್ಲಿ ಕಣಕವನ್ನು ನಾದಿದಂತೆ. ಕಣಕ ಎಂದರೆ ಕಲಸಿರುವ ಹಿಟ್ಟಿನ ಮುದ್ದೆ. ಅದನ್ನು ಕಂಬಳಿಯ ಮೇಲೆ ನಾದುತ್ತ ಹೋದರೆ ಕಂಬಳಿಯ ತೂತಿನ ಮೂಲಕ ಆಚೆಗೆ ಹೋಗುತ್ತದೆ. ಇದಕ್ಕಾಗಿ ಚಿಂತಿಸಬೇಕಾಗಿಲ್ಲ. ಮುಗ್ಧ ಮತ್ತು ದೃಢ ನಂಬಿಕೆಯಿಂದ ಲಿಂಗದೇವನಿಗೆ ಶರಣಾಗಿ ಬಿಡಬೇಕು. ದೇವನು ತಾನೇ ಮನಸ್ಸನ್ನು ಗಟ್ಟಿಗೊಳಿಸುವನು.

265. ಲಿಂಗದೇವ ಸರ್ವ ಇಷ್ಟಪ್ರದಾಯಕ

ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾರೆನಯ್ಯಾ;
ನಿಮ್ಮುವ ಪೂಜಿಸಿ ಭವಬಂಧನ ಬಿಡಬೇಕಯ್ಯಾ
ಹಿಂದಣ ಜನ್ಮದ ಚಿಹ್ನ ಬಿಡದನ್ನಕ್ಕ
ನಿಮ್ಮುವ ಪೂಜಿಸಿ ಏವೆನಯ್ಯಾ?
ಎನ್ನ ಮನದ ಅವಗುಣವ ಕಳೆದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಲಿಂಗದೇವಾ -ಬ.ವ.ದೀ.262

ಸೃಷ್ಟಿಕರ್ತನಾದ ಲಿಂಗದೇವನು ಸರ್ವ ಇಷ್ಟಾರ್ಥ ಸಿದ್ಧಿಪ್ರದಾಯಕನು. ಅವನೇ ಸೃಷ್ಟಿಸಿದವು ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ ಇತ್ಯಾದಿ. ಹೀಗಾಗಿ ಸೃಷ್ಟಿಕರ್ತನೇ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ ಎಲ್ಲವೂ. ಕರ್ತನೇ ಎಲ್ಲ ಅಭಿಲಾಷೆಯನ್ನು ಪೂರೈಸುವಾಗ ಇನ್ನು ಬೇರೆ ಬೇರೆ ಕಾಲ್ಪನಿಕ ದೇವತೆಗಳನ್ನು ಏಕೆ ಬೇಡಬೇಕು? ದೇವನನ್ನು ಪೂಜಿಸುತ್ತಾ ಹೋದಂತೆ ಲೌಕಿಕ ವ್ಯಾಮೋಹ ಅಳಿಯುತ್ತ ಹೋಗಬೇಕು. ಹಿಂದಣ ಜನ್ಮದ ಚಿಹ್ನೆ ಎಂದರೆ ದೀಕ್ಷೆಗೂ ಮೊದಲಿನ ಚಿಹ್ನೆಗಳು, ಲಾಂಛನ, ನಂಬಿಕೆಗಳು, ಆಚರಣೆಗಳು ಅಳಿದು ಸ್ವೀಕರಿಸಿದ ಧರ್ಮದ ನಂಬಿಕೆಗಳು, ಆಚರಣೆಗಳು ಅಳವಡಬೇಕು; ಚಿಹ್ನೆಗಳನ್ನು ಧರಿಸಬೇಕು.

ಪೂಜೆ ಮಾಡುತ್ತ ಹೋದಂತೆ ಮನಸ್ಸಿನ ಅವಗುಣಗಳು ಅಳಿಯಬೇಕು. ಶರಣರ ಒಡನಾಟದಿಂದ ಸುಜ್ಞಾನ ಪ್ರಾಪ್ತಿಯಾಗುವುದು; ಮಾರ್ಗದರ್ಶನ ಲಭಿಸುವುದು. ಆದ್ದರಿಂದ ನಿಜಭಕ್ತನು ಶರಣರಿಗೆ ಶರಣೆಂದು ವಂದಿಸಿ ಅವರ ಒಡನಾಟದಲ್ಲಿ ಇರಬೇಕು.

266. ಲಿಂಗ ವ್ಯಸನಿ - ಜಂಗಮ ಪ್ರೇಮಿ ಆಗಬೇಕು

ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ ಎನ್ನ -
ಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯಾ
ಅವಶ್ಯಮನುಭೋಕ್ತವ್ಯಂ ಎಂದೆನಿಸದಿರಯ್ಯಾ-
ಲಿಂಗದೇವಾ, ಸೆರಗೊಡ್ಡಿ ಬೇಡುವೆನು. -ಬ.ವ.ದೀ.264

ವ್ಯಕ್ತಿ ಹಾಳಾಗುವುದು ದುರ್ವ್ಯಸನಗಳಿಂದ ಮತ್ತು ದುರಾಚಾರಗಳಿಂದ. ಕುಡಿತ, ಜೂಜು ಧೂಮಪಾನ ಮುಂತಾದವು ದುರ್ವ್ಯಸನಗಳು. ಇದರಿಂದ ವ್ಯಕ್ತಿಯು ವೈಯಕ್ತಿಕವಾಗಿ ಹಾಳಾಗುವನು. ಮತ್ತು ಇವುಗಳಿಂದ ವೈಯಕ್ತಿಕ ಪಾಪ (Individual sin)ವು ಬರುತ್ತದೆ. ಲಂಚ, ವಂಚನೆ, ಮೋಸ, ವ್ಯಭಿಚಾರ ಮುಂತಾದುವು ದುರಾಚಾರಗಳು. ಇವುಗಳಿಂದ ಬೇರೆಯವರಿಗೂ ಅನ್ಯಾಯವಾಗುತ್ತದೆ. ಮತ್ತು ಸಾಮಾಜಿಕ ಪಾಪ (Social sin)ವು ಬರುತ್ತದೆ. ಆದ್ದರಿಂದ ವ್ಯಕ್ತಿಯು ಇವೆರಡರಿಂದಲೂ ಮುಕ್ತನಾಗಬೇಕು. ಬದಲಿಗೆ ಲಿಂಗ ವ್ಯಸನಿಯಾಗಿ ಪೂಜೆ, ದೇವಧ್ಯಾನದಲ್ಲಿ ನಿರತನಾಗಬೇಕು. ಜಂಗಮ ಪ್ರೇಮಿಯಾಗಿ ಷಡಂಗ ದಾಸೋಹ ತನು -ಮನ -ಧನ-ಅಭಿಮಾನ-ಸಮಯ-ಪ್ರಾಣ ದಾಸೋಹಕ್ಕೆ ಸಿದ್ಧನಾಗಬೇಕು. ದುರ್ವ್ಯಸನ ದುರಾಚಾರಗಳಿಗೆ ವ್ಯಯವಾಗುವ ಸಮಯವನ್ನು, ಹಣವನ್ನು ಜಂಗಮ ದಾಸೋಹ ಅರ್ಥಾತ್ ಸಮಾಜ ಸೇವೆಗೆ ಬಳಸಿದ್ದೇ ಆದರೆ ಮಹದುಪಕಾರ -ವಾಗುವುದು. "ಅವಶ್ಯವನುಭೋಕ್ತವ್ಯಂ" ಎಂದು ಸಮಯ ಸಾಧಕನಾಗಬಾರದು. ಇದನ್ನೇ ಲಿಂಗದೇವನಲ್ಲಿ ಗುರು ಬಸವಣ್ಣನವರು ಸೆರಗೊಡ್ಡಿ ಬೇಡುವರು. (ಮುಂದುವರಿಯುವುದು)

ಅಗಸ್ಟ್ ತಿಂಗಳಲ್ಲಿ ಬರುವ ಹಬ್ಬಗಳು

1.	ಪೂಜ್ಯ ಶ್ರೀ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಜಯಂತಿ	ದೇವ(ಭಾನು) ವಾರ	ಅಗಸ್ಟ್ 23
2.	ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ ನೆಯ ವರ್ಧಂತಿ	"	ಅಗಸ್ಟ್ 23
3.	ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ	"	ಅಗಸ್ಟ್ 23

ಕಲ್ಯಾಣ ಕಿರಣ ಚಂದಾದಾರರಲ್ಲಿ ಮನವಿ

ಕಲ್ಯಾಣ ಕಿರಣ ಸಕಾಲದಲ್ಲಿ ತಲುಪದಿರುವುದಕ್ಕೆ ಸರಿಯಾದ ವಿಳಾಸವಿಲ್ಲದಿರುವುದು ಕಾರಣವಾಗಿದ್ದು ಪ್ರತಿ ತಿಂಗಳು ಸುಮಾರು 100 - 150ರವರೆಗೆ ಪ್ರತಿಗಳು ವಾಪಸ್ಸಾಗುತ್ತವೆ. ಆದ್ದರಿಂದ ದಯವಿಟ್ಟು ಸರಿಯಾದ ವಿಳಾಸ ಮತ್ತು ಪಿನ್‌ಕೋಡ್ ಹಾಗೂ ತಮ್ಮ ದೂರವಾಣಿ ಸಂಖ್ಯೆಗಳನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿ. ಕಲ್ಯಾಣ ಕಿರಣದ ಯಾವುದೇ ಸಮಸ್ಯೆಯಿರುವವರು ಈ ಕೆಳಗೆ ನಮೂದಿಸಿದ ಜಂಗಮ ದೂರವಾಣಿಗಳಿಗೆ ಎಸ್.ಎಂ.ಎಸ್. (ಮೆಸೇಜ್) ಅಥವಾ ಕರೆ ಮಾಡಿ ತಮ್ಮ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಲು ಕೋರುತ್ತೇವೆ.

ದೂರವಾಣಿಗಳ ಸಂಖ್ಯೆಗಳು: 9620058492, 9036351066, 9481249857

ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಕೆ

ಬಸವ ಧರ್ಮಪೀಠ, ರಾಷ್ಟ್ರೀಯ ಬಸವದಳ, ಲಿಂಗಾಯತ ಧರ್ಮ ಮಹಾಸಭಾ ವತಿಯಿಂದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್. ಯಡೆಯೂರಪ್ಪನವರಿಗೆ ದಿ. 28-7-2009 ಶಿವ (ಸೋಮ)ವಾರದಂದು 2 ಮನವಿಗಳನ್ನು ಸಲ್ಲಿಸಲಾಗಿದೆ. ಎರಡೂ ಮನವಿಗಳನ್ನು ಅಗಸ್ಟ್ ಕಲ್ಯಾಣ ಕಿರಣದಲ್ಲಿ ಮುದ್ರಿಸಲಾಗಿದೆ.

ಕಂದಾಯ ಇಲಾಖೆಯಿಂದ, ನೆಮ್ಮದಿ ಕೇಂದ್ರಗಳಿಂದ ಆದಾಯ ಮತ್ತು ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಹಾಕಿದರೆ, ಅರ್ಜಿಯಲ್ಲಿ ತಾವು ಲಿಂಗಾಯತರು ಎಂದು ಕಾಣಿಸಿದ್ದರೂ ಸಹ ತಹಸೀಲ್ದಾರರು ಅರ್ಜಿದಾರರ ಜಾತಿ ವೀರಶೈವ ಲಿಂಗಾಯತ ಎಂದು ಕಾಣಿಸುತ್ತಿರುವುದು ಪ್ರಮಾದಕರ. ಬೈಲಹೊಂಗಲದ ಶರಣ. ವೀರೇಶ್ ಹಲಕಿ ಇವರು ಎಸ್.ಎಸ್.ಎಲ್.ಸಿ ತೇರ್ಗಡೆ ಬಳಿಕ ಪಡೆದ ಕೊಂಡ ಶಾಲಾ ವರ್ಗಾವಣೆ ಪತ್ರದಲ್ಲಿ ಲಿಂಗಾಯತ ಎಂದಿದೆ. ನಂತರದ ವರ್ಷಗಳಲ್ಲಿ ಪಡೆದುದರಲ್ಲಿಯೂ ಲಿಂಗಾಯತ, ಲಿಂಗವಂತ ಎಂದಿದೆ. 2009ರಲ್ಲಿ ಅರ್ಜಿ ಹಾಕಿದಾಗ ಅದು ವೀರಶೈವ ಲಿಂಗಾಯತ ಎಂದಾಗಿದೆ. ಇದೇಕೆ ಹೀಗೆ ಕೊಡುವಿರಿ? ಎಂದು ಪ್ರಶ್ನಿಸಿದಾಗ ಸರ್ಕಾರದ ಸುತ್ತೋಲೆ ಹೀಗಿದೆ ಎಂದು ತಹಸೀಲ್ದಾರರು ಹೇಳಿದ್ದಾರೆ.

ಈ ಬದಲಾವಣೆ ಏಕಾಯಿತು? ಹೇಗಾಯಿತು? ಸರ್ಕಾರ ಯಾರನ್ನು ಕೇಳಿ ಈ ಬದಲಾವಣೆ ಮಾಡಿತು? ಒಳಗೊಳಗೇ ನಡೆದ ಈ ಹಾನಿಕಾರಕ ಬದಲಾವಣೆಗೆ ಮುಖ್ಯ ಕಾರಣರು ಯಾರು? ಇದನ್ನು ಪ್ರತಿಭಟಿಸಲೇ ಬೇಕು.

ದಿ. 23-8-09ರಂದು ಪೂಜ್ಯ ಲಿಂ.ಅಪ್ಪಾಜಿಯವರ ಜಯಂತಿ ಕಾರ್ಯಕ್ರಮ, ಪೂಜ್ಯರ ಸ್ಮರಣಾರ್ಥ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವಿದೆ. ಅಂದು ಕಾರ್ಯಕ್ರಮದಲ್ಲಿ ಎಲ್ಲರಿಗೂ ತಿಳಿಸಿ, ದಿ. 24-8-09, ಶಿವವಾರದಂದು ಶರಣ ಬಂಧುಗಳು ಜಿಲ್ಲಾಧಿಕಾರಿ/ ಸಹಾಯಕ ಆಯುಕ್ತರು/ ತಹಸೀಲ್ದಾರರ ಕಾರ್ಯಾಲಯಕ್ಕೆ ಮೆರವಣಿಗೆಯಲ್ಲಿ ತೆರಳಿ ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಕಳಿಸಬೇಕು. ಅರ್ಜಿದಾರನು ಅರ್ಜಿಪತ್ರದಲ್ಲಿ ತನ್ನದು ಯಾವ ಜಾತಿ ಎಂದು ಕಾಣಿಸುವನೋ ಅದನ್ನು ಬರೆಯಬೇಕಾದುದು ತಹಸೀಲ್ದಾರರ ಕರ್ತವ್ಯ.

ಆದ್ದರಿಂದ ಚಳುವಳಿಯ ಮೊದಲನೆಯ ಹೆಜ್ಜೆಯಾಗಿ ಮನವಿ ಪತ್ರವನ್ನು ಕೊಡುವ ಕೆಲಸವನ್ನು ಶರಣ ಬಂಧುಗಳು ಮಾಡಬೇಕಾಗಿ ಸೂಚಿಸುತ್ತೇವೆ. ಮತ್ತು ಪತ್ರಿಕೆಗಳಲ್ಲಿ ಭಾವಚಿತ್ರ ಸಹಿತವಾಗಿ ಮನವಿ ಸಲ್ಲಿಕೆಯ ವರದಿ ಬರುವಂತೆ ನೋಡಿಕೊಳ್ಳಬೇಕು. ನಂತರದ ಹೆಜ್ಜೆ ಧರಣಿ ಸತ್ಯಾಗ್ರಹ. ದಿ. 28-7-09ರಂದು ಮನವಿ ಕೊಟ್ಟಾಗ ಈ ಬಗ್ಗೆ ಬೇಗನೆ ಕ್ರಮಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿರುವ ಕಾರಣ ಕಾಯ್ದು ನೋಡೋಣ. ನಮ್ಮ ಬೇಡಿಕೆ ಈಡೇರದಿದ್ದರೆ ಧರಣಿ ಸತ್ಯಾಗ್ರಹ ಆರಂಭಿಸಬಹುದಾಗಿರುತ್ತದೆ. ಮನವಿ ಪತ್ರದ ಮಾದರಿ ಪುಟ 31 ರಲ್ಲಿದೆ.

ಶ್ರೀಯುತರಾದ ಬಿ.ಎಸ್. ಯಡೆಯೂರಪ್ಪನವರು
ಸನ್ಮಾನ್ಯ ಮುಖ್ಯಮಂತ್ರಿಗಳು　　　　　ದಿ: 27-7-2009
ಕರ್ನಾಟಕ ಸರ್ಕಾರ
ಬೆಂಗಳೂರು

ಇವರಲ್ಲಿ ವಿಜ್ಞಾಪನೆಗಳು

ಮಾನ್ಯರೇ,

ವಿಷಯ : ವಿಶ್ವಗುರು ಬಸವಣ್ಣನವರ 814ನೆಯ ಲಿಂಗೈಕ್ಯ ಸಂಸ್ಮರಣೆಯ ಕಾರ್ಯಕ್ರಮದಲ್ಲಿ ತೆಗೆದುಕೊಂಡ ನಿರ್ಣಯಗಳು

ವಿಶ್ವಗುರು ಬಸವಣ್ಣನವರ 814ನೆಯ ಲಿಂಗೈಕ್ಯ ಸಂಸ್ಮರಣಾ ಕಾರ್ಯಕ್ರಮವು ದಿ. 25-7-2009ರಂದು ಸರ್.ಕೆ.ಪಿ.ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ಜರುಗಿದ್ದು, ಸಮಾವೇಶವಾದ ಶರಣ ಬಂಧುಗಳು ಕೆಳಗಿನಂತೆ ನಿರ್ಣಯಗಳನ್ನು ತೆಗೆದುಕೊಂಡಿದ್ದು, ಅದನ್ನು ಮನವಿಯ ರೂಪದಲ್ಲಿ ತಮಗೆ ಸಲ್ಲಿಸಲಾಗುತ್ತಿದೆ.

1. ಉಳವಿ ಅಭಿವೃದ್ಧಿ ಪ್ರಾಧಿಕಾರ ರಚನೆ.

ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೋಕಿನಲ್ಲಿರುವ ಉಳವಿಯು ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಸಮಾಧಿ ಇರುವ ಜಂಗಮ ಕ್ಷೇತ್ರ. ಪ್ರಾಕೃತಿಕ ಸಂಪತ್ತಿನಿಂದ ಶೋಭಿಸುತ್ತಿರುವ ಈ ಕ್ಷೇತ್ರವು ಸರ್ವಾಂಗೀಣವಾಗಿ ಅಭಿವೃದ್ಧಿ ಸಾಧಿಸಬೇಕಾಗಿದೆ. ಕರ್ನಾಟಕ ಸರ್ಕಾರವು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ, ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಅವೆರಡೂ ಕ್ಷೇತ್ರಗಳ ಬೆಳವಣಿಗೆಗೆ ಬೃಹತ್ ಯೋಜನೆ ರೂಪಿಸಿದೆ. ಅದೇ ರೀತಿ ಉಳವಿ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿ ಅದರ ಬೆಳವಣಿಗೆಗೆ ಯೋಜನೆ ರೂಪಿಸಬೇಕೆಂದು ಕೋರುತ್ತೇವೆ.

ಈ ಯೋಜನೆಯ ಅಂಗವಾಗಿ

ಅ. ತೂಗು ಸೇತುವೆ ನಿರ್ಮಾಣ

ಕೊಡಸಳ್ಳಿ ಜಲ ವಿದ್ಯುತ್ ಯೋಜನೆಯ ಅಂಗವಾಗಿ ನಿಂತ ಕಾಳಿ ನದಿಯ ಹಿನ್ನೀರಿನಿಂದ ಯಲ್ಲಾಪುರ - ಉಳವಿಯ ಕಾಲುದಾರಿ ಮುಳುಗಿ ಹೋಗಿ ಯಾತ್ರಾರ್ಥಿ ಸದ್ಭಕ್ತರಿಗೆ ಮತ್ತು ನಿತ್ಯದ ವ್ಯವಹಾರ ಮಾಡುವವರಿಗೆ ಬಹಳ ತೊಂದರೆಯಾಗಿದೆ. ನಾಡ ತೆಪ್ಪದ ಮೇಲೆ ಜಲಾಶಯದ ನೀರನ್ನು ದಾಟುವುದು ಬಹಳ ಅಪಾಯಕಾರಿಯಾಗಿದೆ.

ಆದ್ದರಿಂದ ಈ ತಕ್ಷಣವೇ ಯಾಂತ್ರೀಕೃತ ದೋಣಿಯನ್ನು ವ್ಯವಸ್ಥೆ ಮಾಡಬೇಕೆಂದು, ಶಾಶ್ವತವಾಗಿ ತೂಗು ಸೇತುವೆಯ ಕಾಲುದಾರಿಯನ್ನು ನಿರ್ಮಾಣ ಮಾಡಬೇಕೆಂದು ಕೋರುತ್ತೇವೆ.

ಆ. ಮಹಾಮನೆ ಗವಿ ಮತ್ತು ಆಕಳ ಗವಿಯ ಸಂರಕ್ಷಣೆ.

ಉಳವಿಯಲ್ಲಿ ಇರುವ ಕೆಲವು ಐತಿಹಾಸಿಕ ಸ್ಥಾನಗಳೆಂದರೆ ಮಹಾಮನೆ ಗವಿ, ಆಕಳ ಗವಿ, ಅಕ್ಕನಾಗಮ್ಮನ ಗವಿ ಇತ್ಯಾದಿ. ಇವು ಲಿಂಗಾಯತ ಧರ್ಮೀಯರ ಪವಿತ್ರ ಮತ್ತು ದರ್ಶನೀಯ ಸ್ಥಾನಗಳು. ಇವುಗಳನ್ನು ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸುವುದರೊಡನೆ ಮಹಾಮನೆ ಗವಿಯನ್ನು ಕೇಂದ್ರ ಸರ್ಕಾರದ ಹುಲಿ ಸಂರಕ್ಷಣೆ ಯೋಜನೆಯಿಂದ ನಿರ್ಬಂಧಿತ ಪ್ರದೇಶವನ್ನಾಗಿ ಮಾಡದೆ, ಭಕ್ತರು ಸಂದರ್ಶಿಸಲಿಕ್ಕೆ ಹೋಗಲು ಅನುಕೂಲವಾಗುವಂತೆ ರಸ್ತೆ ಮಾಡಿ, ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಕೋರುತ್ತೇವೆ. ಅಮರನಾಥ, ವೈಷ್ಣೋದೇವಿ ಸಂದರ್ಶನಕ್ಕೆ ಜಮ್ಮು - ಕಾಶ್ಮೀರ ಸರ್ಕಾರ ವ್ಯವಸ್ಥೆ ಮಾಡುವಂತೆ ಮಹಾಮನೆ ಗವಿಯ ಸಂದರ್ಶನಕ್ಕೆ ಏರ್ಪಾಡು ಮಾಡಬೇಕೆಂದು ಕೋರುತ್ತೇವೆ.

ಐತಿಹಾಸಿಕ ಸ್ಥಳಗಳನ್ನು ಕಳೆದುಕೊಂಡು, ಅರಣ್ಯದಲ್ಲಿ ಮುಚ್ಚಿ ಹೋಗುವಂತೆ ಮಾಡಿ ನಂತರ ಹುಡುಕುವಂತೆ ಆಗಬಾರದು. ದಯವಿಟ್ಟು ಮುಂಜಾಗ್ರತೆ ವಹಿಸಬೇಕೆಂದು ವಿನಂತಿಸುತ್ತೇವೆ.

2. ಗೋ ವಂಶ ಹತ್ಯೆ ನಿಷೇಧ ವಿಧೇಯಕಕ್ಕೆ ಬೆಂಬಲ

ತಮ್ಮ ಸರ್ಕಾರವು ಗೋ ವಂಶ ಹತ್ಯೆಯನ್ನು ನಿಷೇಧಿಸುವ ಕಾನೂನು ಜಾರಿಗೆ ತರುವ ಆಲೋಚನೆ ಹೊಂದಿರುವುದು ಹೆಮ್ಮೆಯ ಸಂಗತಿಯಾಗಿದೆ. ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ರೈತನ ಜೀವನಾಡಿಯಾದ ಗೋವಂಶವನ್ನು ರಕ್ಷಿಸುವುದು ಅತ್ಯವಶ್ಯವಾಗಿದೆ. ನೈಸರ್ಗಿಕ ಮತ್ತು ಸಾವಯವ ಕೃಷಿ ಇಂದಿನ ಅಗತ್ಯವಾಗಿದೆ. ಬಡ ಮತ್ತು ಮಧ್ಯಮ ವರ್ಗದ ರೈತರೇ ಹೆಚ್ಚಾಗಿರುವ ಈ ದೇಶದಲ್ಲಿ ಉಳುಮೆಗಾಗಿ ಎತ್ತು ಮತ್ತು ಕೋಣಗಳು ಅವಶ್ಯವಿವೆ. ಆದ್ದರಿಂದ ಗೋ ವಂಶ ನಾಶ ಕೇವಲ ಧಾರ್ಮಿಕ ಸಮಸ್ಯೆಯಾಗಿರದೆ ರಾಷ್ಟ್ರೀಯ ಸಮಸ್ಯೆಯಾಗಿದ್ದು ತಮ್ಮ ಸರ್ಕಾರದ ಈ ಕಾರ್ಯಕ್ಕೆ ಬಸವ ಧರ್ಮ ಪೀಠ, ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ ಹೃತ್ಪೂರ್ವಕವಾಗಿ ಬೆಂಬಲಿಸುತ್ತವೆ.

3. ವೀರಶೈವ ಲಿಂಗಾಯತ ಸುತ್ತೋಲೆ ವಾಪಸ್ಸಿಗೆ ಆಗ್ರಹ

ಆದಾಯ ಪತ್ರ (Income Certificate) ಮತ್ತು ಜಾತಿ ಪ್ರಮಾಣ ಪತ್ರವನ್ನು ಕೋರಿ ತಹಸೀಲ್ದಾರರಿಗೆ ಅರ್ಜಿಯನ್ನು ಹಾಕಿದಾಗ, ಅರ್ಜಿದಾರರು ತಾವು ಲಿಂಗಾಯತ ಎಂದು

ಸೂಚಿಸಿದ್ದಾಗಿಯೂ ತಹಸೀಲ್ದಾರರು ವೀರಶೈವ ಲಿಂಗಾಯತ ಎಂದು ಪ್ರಮಾಣ ಪತ್ರವನ್ನು ಕೊಡುತ್ತಿದ್ದಾರೆ. ಲಿಂಗಾಯತ ಸಮಾಜದಲ್ಲಿ ಇರುವವರೆಲ್ಲರೂ ವೀರಶೈವ ಲಿಂಗಾಯತರಲ್ಲ. ಲಿಂಗಾಯತ ಸಮಾಜದಲ್ಲಿ ವೀರಶೈವ ಲಿಂಗಾಯತರು ಒಂದು ಪಂಗಡ (group) ಮಾತ್ರ; ಉಳಿದಂತೆ ಬಣಜಿಗ ಲಿಂಗಾಯತರು, ನಗರ್ತ ಲಿಂಗಾಯತರು, ಗಾಣಿಗ ಲಿಂಗಾಯತರು, ಸಾದು ಲಿಂಗಾಯತರು, ರೆಡ್ಡಿ ಲಿಂಗಾಯತರು ಇತ್ಯಾದಿ ಪಂಗಡಗಳಿವೆ. ಆದ್ದರಿಂದ ಒಂದು, ಎಲ್ಲರನ್ನೂ ಲಿಂಗಾಯತ ಎಂದು ಕರೆಯಬೇಕು, ಇಲ್ಲವೇ ಅವರ ಪಂಗಡದ ಹೆಸರನ್ನು ಲಿಂಗಾಯತದೊಡನೆ ಸೇರಿಸಬೇಕು. ಆದಷ್ಟು ಬೇಗನೆ ಈ ಲೋಪವನ್ನು ಸರಿಪಡಿಸಿ ಸುತ್ತೋಲೆ ಹೊರಡಿಸಬೇಕು.

ಇಲ್ಲವಾದರೆ ಕಾನೂನು ಕ್ರಮಕ್ಕಾಗಿ ನ್ಯಾಯಾಲಯದ ಮೊರೆ ಹೋಗುವುದು ಇಲ್ಲವೇ ಚಳುವಳಿ ಮಾಡುವುದು ಅನಿವಾರ್ಯವಾಗುತ್ತದೆ ಎಂದು ನಮ್ರವಾಗಿ ಹೇಳಬಯಸುತ್ತೇವಲ್ಲದೆ ಆದಷ್ಟು ತೀವ್ರವಾಗಿ ಈ ದೋಷವನ್ನು ಸರಿಪಡಿಸಲು ವಿನಂತಿಸುತ್ತೇವೆ.

4. ಸಂಸ್ಕೃತ ವಿಶ್ವವಿದ್ಯಾಲಯ ಬೇಡ.

ಭಾರತದಲ್ಲಿ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಭಾಷೆಯ ಅಧ್ಯಯನಕ್ಕೆ ಅವಕಾಶವಿದೆ. ಆಸಕ್ತಿ ಇರುವವರು ಅಲ್ಲಿ ಓದುತ್ತಾರೆ. ಮಠ - ಮಾನ್ಯಗಳು ಸಂಸ್ಕೃತ ಪಾಠಶಾಲೆ ತೆರದಿವೆ. ಆದ್ದರಿಂದ ಪ್ರತ್ಯೇಕವಾಗಿ ಪೂರ್ಣ ಪ್ರಮಾಣದ ವಿಶ್ವವಿದ್ಯಾಲಯದ ಅಗತ್ಯವಿಲ್ಲ. ಇಂಥ ಒಂದು ಅನುತ್ಪಾದಕ ಯೋಜನೆಯನ್ನು ಕೈಬಿಡಬೇಕೆಂದು ಆಗ್ರಹಪೂರ್ವಕವಾಗಿ ವಿನಂತಿಸುತ್ತೇವೆ.

5. ಕನ್ನಡ ಭಾಷೆಯ ಪುಷ್ಟೀಕರಣ.

ಕನ್ನಡ ಶ್ರೀಮಂತಭಾಷೆ, ಸಾಹಿತ್ಯಿಕ ಮತ್ತು ದಾರ್ಶನಿಕ ಸಂಪತ್ತನ್ನು ಹೊಂದಿದೆ. ಇದನ್ನು ಬೆಳೆಸಲು, ಬಲಗೊಳಿಸಲು ಯೋಜನೆ ರೂಪಿಸಿರಿ. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ವಿಶೇಷ ಸವಲತ್ತು ಘೋಷಿಸಿರಿ. ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವ್ಯಯಿಸಬೇಕೆಂದಿರುವ ಹಣವನ್ನು ಸೂರಿಲ್ಲದ, ಕಟ್ಟಡವಿಲ್ಲದ ಸರ್ಕಾರಿ ಶಾಲೆ, ಕಾಲೇಜುಗಳ ನಿರ್ಮಾಣಕ್ಕೆ, ಶಿಕ್ಷಕರನ್ನು ನೇಮಿಸಲು ಬಳಸಿರಿ. ಕನ್ನಡ ಶಾಲೆಗಳನ್ನು ನಡೆಸುವ ಖಾಸಗಿ ಸಂಸ್ಥೆಗಳಿಗೆ ಬೇಗನೆ ಅನುದಾನ, ಪ್ರೋತ್ಸಾಹ ನೀಡಿರಿ. ನಿಮ್ಮ ಅಧಿಕಾರದ ಅವಧಿಯಲ್ಲಿ ಅನುತ್ಪಾದಕ ವೆಚ್ಚದ ಯೋಜನೆಗಳ ಬದಲು ಅರ್ಥಪೂರಿತ ಯೋಜನೆಗಳನ್ನು ರೂಪಿಸಿ ದೇಶದಲ್ಲಿಯೇ ಮಾದರಿಯಾದ ಆಡಳಿತ ರೂಪಿಸಬೇಕೆಂದು ಕೋರುತ್ತೇವೆ.

ಶರಣ. ಎನ್.ಪುಟ್ಟರುದ್ರ
ಅಧ್ಯಕ್ಷರು,ಲಿಂ. ಧರ್ಮ ಮಹಾಸಭಾ
ಬೆಂಗಳೂರು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ
ಕೂಡಲ ಸಂಗಮ

ಬಸವ ಗಂಗೋತ್ರಿಯ ಅಕ್ಕಮಹಾದೇವಿ ದಿವ್ಯಾಲಯ ಧನ ಸಹಾಯಕ್ಕೆ ಮನವಿ

ಬಸವ ಗಂಗೋತ್ರಿ ನಗರದ ನಿವಾಸಿಗಳ ಅರ್ಚನೆಗಾಗಿ ಅಕ್ಕಮಹಾದೇವಿ ದಿವ್ಯಾಲಯವನ್ನು ನಿರ್ಮಿಸಲಾಗುತ್ತಿದೆ. ಅಂದಾಜು 5 ಲಕ್ಷ ರೂಗಳ ವೆಚ್ಚದಲ್ಲಿ ಕಟ್ಟಡವು ನಿರ್ಮಾಣವಾಗುತ್ತಲಿದೆ. ಅಡಿಪಾಯದ ಕೆಲಸ ಮುಗಿದಿದೆ. ಈ ದಿವ್ಯಾಲಯದ ನಿರ್ಮಾಣಕ್ಕೆ ಸದ್ಭಕ್ತರು ಉದಾರವಾಗಿ ದೇಣಿಗೆ ನೀಡಬೇಕೆಂದು ಕೋರುತ್ತೇವೆ.

ಅಮೃತ ಶಿಲೆಯಲ್ಲಿ ಅಕ್ಕಮಹಾದೇವಿ ತಾಯಿಯವರ ದಿವ್ಯ ಮೂರ್ತಿಗೆ ಒಬ್ಬರೇ ದಾನಿಗಳು ಧನ ಸಹಾಯ ಮಾಡಿದರೆ (80,000 - ಎಂಬತ್ತು ಸಾವಿರ) ಅವರ ಹೆಸರಿನ ಫಲಕವನ್ನು ಹಾಕಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಅಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್
ಬೆಂಗಳೂರು

ಶ್ರೀಯುತರಾದ ಬಿ.ಎಸ್.ಯಡೆಯೂರಪ್ಪನವರು ದಿ: 27-7-2009
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು

ಇವರಲ್ಲಿ ವಿಜ್ಞಾಪನೆಗಳು

ಮಾನ್ಯರೇ,

ವಿಷಯ : ಲಿಂಗಾಯತ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಕೊಡುವಾಗ ವೀರಶೈವ ಲಿಂಗಾಯತ ಎಂದು ಕೊಡುವ ಬಗ್ಗೆ ಆಕ್ಷೇಪ ಮತ್ತು ಸುತ್ತೋಲೆ ವಾಪಸ್ಸಿಗೆ ಮನವಿ.

ಲಿಂಗಾಯತ ಧರ್ಮೀಯರು ತಹಸೀಲ್ದಾರರಿಂದ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಹಾಕಿದಾಗ, ಅದರಲ್ಲಿ ತಾವು ಲಿಂಗಾಯತರು ಎಂದು ನಮೂದಿಸಿದರೂ ಸಹ ಅವರಿಗೆ ತಹಸೀಲ್ದಾರರು ವೀರಶೈವ ಲಿಂಗಾಯತ ಎಂದು ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಕೊಡುತ್ತಿದ್ದಾರೆ. ಇದು ಬಹು ದೊಡ್ಡ ಪ್ರಮಾದವಾಗಿದೆ.

ಲಿಂಗಾಯತ ಧರ್ಮವನ್ನು ಸ್ವೀಕರಿಸಿರುವ ಸಮುದಾಯದಲ್ಲಿ ಹಲವಾರು ಪಂಗಡಗಳ ಜನರಿದ್ದು ಅವರಲ್ಲಿ ವೀರಶೈವ - ಲಿಂಗಾಯತರು ಸಹ ಒಂದು ಪಂಗಡ (group). ಅದರಂತೆ ಈ ಸಮಾಜದಲ್ಲಿ ಬಣಜಿಗ ಲಿಂಗಾಯತರು, ರೆಡ್ಡಿ ಲಿಂಗಾಯತರು, ಸಾದು ಲಿಂಗಾಯತರು, ಗಾಣಿಗ ಲಿಂಗಾಯತರು, ನೊಳಂಬ ಲಿಂಗಾಯತರು, ಹಡಪದ ಲಿಂಗಾಯತರು, ಹೆಳವ ಲಿಂಗಾಯತರು ಮುಂತಾಗಿ ಹತ್ತಾರು ಪಂಗಡಗಳ ಜನರಿದ್ದಾರೆ. ಹೀಗಿದ್ದಾಗ ಎಲ್ಲರಿಗೂ ವೀರಶೈವ ಲಿಂಗಾಯತ ಎಂದು ಜಾತಿ ಪ್ರಮಾಣ ಪತ್ರ ನೀಡುವುದು ತಪ್ಪಾಗುತ್ತದೆ.

ನಿಮ್ಮ ಗಮನಕ್ಕೆ ತರಲು ವೀರೇಶ ಹಲಕಿ ಎಂಬ ಓರ್ವರ ಪ್ರಮಾಣ ಪತ್ರಗಳನ್ನು ದಾಖಲೆಯಾಗಿ ನೀಡುತ್ತಿದ್ದೇವೆ.

1. 2002ರಲ್ಲಿ ಅವರ ಹೆಸರಲ್ಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರದ ವರ್ಗಾವಣೆ ಪತ್ರದಲ್ಲಿ ಹಿಂದು ಲಿಂಗಾಯತ ಎಂದಿದೆ.
2. 2003ರಲ್ಲಿ ಕೊಟ್ಟಿರುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರದಲ್ಲಿ ಲಿಂಗವಂತ (III B ವರ್ಗ) ಎಂದಿದೆ.
3. 2005ರಲ್ಲಿ ಕೊಟ್ಟಿರುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರದಲ್ಲಿ ಜಾತಿಯು ಲಿಂಗಾಯತ (III B ವರ್ಗ) ಎಂದಿದೆ.
4. 2009ರಲ್ಲಿ ದಿ.23-7-2009ರಂದು ತಹಸೀಲ್ದಾರರು, ಬೈಲಹೊಂಗಲ ತಾಲ್ಲೋಕು ಇವರು ಕೊಟ್ಟ ಆದಾಯ ಮತ್ತು ಜಾತಿ ಪ್ರಮಾಣ ಪತ್ರದಲ್ಲಿ ವೀರಶೈವ ಲಿಂಗಾಯತ ಎಂದು ಕಾಣಿಸಲಾಗಿದೆ.

ಈ ರೀತಿಯ ಬದಲಾವಣೆ ಏಕಾಯಿತು? ಹೇಗಾಯಿತು ಎಂದರೆ ಸರ್ಕಾರದಿಂದಲೇ ಸುತ್ತೋಲೆ ಇದೆ ಎಂದು ಉತ್ತರಿಸುತ್ತಾರೆ. ಎಲ್ಲ ಲಿಂಗಾಯತರೂ ವೀರಶೈವ ಲಿಂಗಾಯತರಲ್ಲ. ಆದರಿಂದ ತಕ್ಷಣವೇ ಈ ಲೋಪವನ್ನು ಸರಿಪಡಿಸಿ ಸುತ್ತೋಲೆಯನ್ನು ವಾಪಸ್ಸು ಪಡೆಯಬೇಕೆಂದು ಆಗ್ರಹಿಸುತ್ತೇವಲ್ಲದೆ, ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಧರ್ಮ/ಜಾತಿಯ ಹೆಸರು ಬರೆದು ಕೊಟ್ಟಂತೆ ಅರ್ಥಾತ್ ಘೋಷಿಸಿಕೊಂಡಂತೆ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ತಹಸೀಲ್ದಾರರು ವಿತರಿಸುವಂತೆ ಆಜ್ಞೆ (ಸುತ್ತೋಲೆ) ಹೊರಡಿಸಬೇಕೆಂದು ಕೋರುತ್ತೇವೆ.

ಕಾನೂನು ಕ್ರಮಕ್ಕೆ ಮೊರೆ ಹೋಗುವ ಮುನ್ನ ಅಥವಾ ಜನತೆ ಚಳುವಳಿಯನ್ನು ಆರಂಭಿಸುವ ಮುನ್ನವೇ ತಾವು ಮುನ್ನೆಚ್ಚರಿಕೆ ವಹಿಸಿ ಆಗಿರುವ ದೋಷವನ್ನು ಸರಿಪಡಿಸಬೇಕೆಂದು ಕೋರುತ್ತೇವೆ. (ಈ ಮನವಿ ಪತ್ರವನ್ನು ರಾಷ್ಟ್ರೀಯ ಬಸವದಳಗಳವರು ತಮ್ಮ ಶಾಖೆಯ ಲೆಟರ್ ಹೆಡ್ಡಲ್ಲಿ ಡಿ.ಟಿ.ಪಿ. ಮಾಡಿ ಸಂಬಂಧಿಸಿದ ಅಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಕಳಿಸಬೇಕು)

ಲಿಂಗಾಯತವೇ, ವೀರಶೈವವೇ ?

ವೀರಶೈವದ ಪರವಾಗಿ ಇತ್ತೀಚಿಗೆ ಮತ್ತೆ ಮತ್ತೆ ವಾದಿಸುತ್ತಿರುವ ಡಾ॥ ಎಂ.ಚಿ.ಮೂ ಅವರು, ಗದಗ-ಚಿತ್ರದುರ್ಗ ಶ್ರೀಗಳು ವೀರಶೈವ ಪದಗಳನ್ನು ಬಳಸಬೇಕೆಂದು ದಿನಪತ್ರಿಕೆಗಳಲ್ಲಿ ಬರೆದು ಈ ಶಬ್ದದ ಪರ ಮಾತನಾಡಿದ್ದಾರೆ.

ಲಿಂಗಾಯತ (ಲಿಂಗವಂತ) ಬಳಸಬೇಕೆ? ವೀರಶೈವ ಬಳಸಬೇಕೆ ? ಇದು ಬೇರೆ ಪ್ರಶ್ನೆ. ಇವುಗಳಲ್ಲಿ ಯಾವುದು ಪ್ರಾಚೀನ? ಎಂಬುದಕ್ಕೆ ಅವರು ಮೊದಲು ಉತ್ತರ ಕೊಡಬೇಕು. 12ನೆಯ ಶತಮಾನದ ವಚನಗಳ ಷಟ್‌ಸ್ಥಲ ಕಟ್ಟುಗಳಲ್ಲಿ ತಪ್ಪಿಯೂ ಕಂಡು ಬರದ ವೀರಶೈವ ಶಬ್ದ ಹೆಚ್ಚಿನ ವಚನಗಳಲ್ಲಿ ಮಾತ್ರ ಏಕೆ ಸಿಗುತ್ತದೆ? 13ನೆಯ ಶತಮಾನದ ಹರಿಹರ,ರಾಘವಾಂಕ, ಕೆರೆಯ ಪದ್ಮರಸರಲ್ಲಿ ವೀರಶೈವ ಪದ ಒಮ್ಮೆಯೂ ಕಂಡು ಬರುವುದಿಲ್ಲವೇಕೆ? 14ನೇ ಶತಮಾನದ ಕನ್ನಡ ಬಸವಪುರಾಣದಲ್ಲಿ ಮೊದಲ ಸಲ ಅಧಿಕೃತವಾಗಿ ಕಾಣಿಸಿಕೊಳ್ಳುವ ಇದು, ಈ ಕೃತಿಗೆ ಮೂಲವಾಗಿರುವ 13ನೆಯ ಶತಮಾನದ ತೆಲಗು ಬಸವ ಪುರಾಣದಲ್ಲಿ ಏಕೆ ಕಾಣಿಸಿಕೊಳ್ಳುವುದಿಲ್ಲ? ಮೊದ ಮೊದಲು ವೀರಮಾಹೇಶ್ವರಾಚಾರ ಸಂಗ್ರಹ ಮೊದಲಾದ ಶೀರ್ಷಿಕೆ ಗ್ರಂಥಗಳು, 15ನೆಯ ಶತಮಾನದ ಬಳಿಕ ವೀರಶೈವಾಮೃತ ಮಹಾಪುರಾಣ ಮೊದಲಾದ ಶೀರ್ಷಿಕೆಯ ಗ್ರಂಥಗಳು ಹುಟ್ಟಿಕೊಂಡಿರುವುದು ವೀರಮಾಹೇಶ್ವರರ ಪ್ರಾಚೀನ ವೀರಶೈವ ಆಧುನಿಕವೆಂಬುದನ್ನು ಸೂಚಿಸುವುದಿಲ್ಲವೆ? ಲಿಂಗಾಯತವೆಂಬುದು ಧರ್ಮದ ಹೆಸರು, ವೀರಶೈವವೆಂಬುದು ವೀರವ್ರತದ ಹೆಸರೆಂದು ಪ್ರಾಚೀನ ಕೃತಿಗಳು ಸೂಚಿಸುವುದಿಲ್ಲವೇ? ನಾನು ಮೊದಲಿನಿಂದಲೂ ಕೇಳುತ ಬಂದ ಈ ಐದು ಪ್ರಶ್ನೆಗಳಿಗೆ ಉತ್ತರ ಕೊಡದೆ, ಜಾಣತನದಿಂದ ಜಾರಿಕೊಂಡು ಕೃತಕ ವಚನ, 15ನೆಯ ಶತಮಾನದ ತರುವಾಯದ ಆಕರಗಳನ್ನು ಬಳಸಿ ಜನರಿಗೆ ಅಡ್ಡದಾರಿ ತೋರಿಸುವುದು ಸಂಶೋಧನೆಯೇ?

16ನೆಯ ಶತಮಾನದಷ್ಟು ಇತ್ತೀಚಿನವರಾದ ತೋಂಟದಾರ್ಯ. ಅವರ ಶಿಷ್ಯ ಮುರುಘಾ ಶಾಂತವೀರರು ವೀರಶೈವ ಪದ ಬಳಸಿದ್ದಾರೆ ಎನ್ನುವುದು. ಆರಂಭದ ಮುಖ್ಯಮಂತ್ರಿ ನಿಜಲಿಂಗಪ್ಪ, ವೀರೇಂದ್ರ ಪಾಟೀಲರು ಮೈಸೂರು ರಾಜ್ಯ ಪದ ಬಳಸಿರುವುದರಿಂದ ಈ ರಾಜ್ಯಕ್ಕೆ ಆ ಹೆಸರನ್ನು ಈಗಲೂ ಬಳಸಬಹುದು ಎಂದಂತಾಗುತ್ತದೆ. 1720ರಲ್ಲಿ ಬರೆದ ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ ಕೃತಿಯಲ್ಲಿ ಬೆಳವಡಿ ಮಲ್ಲಮ್ಮನ ಮದುವೆಗೆ ಬಂದಿದ್ದ ಪಂಚಸಿಂಹಾಸನಾಧೀಶ್ವರರನ್ನು ಲಿಂಗಾಯತ ಧರ್ಮದವರೆಂದು ಕರೆದುದನ್ನು ಡಾ॥ ಮೂರ್ತಿ ಎತ್ತಿ ಹೇಳಿದ್ದಾರೆ. ಆದರೆ 30 ಪುಟಗಳ ಈ ಸಣ್ಣ ಕೃತಿಯಲ್ಲಿ 9 ಸಲ ಲಿಂಗಾಯತ ಪದ ಬಳಸಲಾಗಿದೆಯೇ ಹೊರತು, ಒಮ್ಮೆಯೂ ವೀರಶೈವ ಪದ ಬಳಸಿಲ್ಲ. ಇದರಿಂದ ಕರ್ನಾಟಕದ ಲಿಂಗಾಯತದಲ್ಲಿ ಸೇರಿಕೊಂಡ ಆಂಧ್ರದ ಆರಾಧ್ಯ ಜಂಗಮರ ಗುರುಗಳಾದ ಪಂಚಾಚಾರ್ಯರನ್ನು ಬೆಳವಡಿ ಮಲ್ಲಮ್ಮನ ಮದುವೆಯವರೆಗೂ ಲಿಂಗಾಯತರೆಂದೇ ಕರೆಯುತ್ತಿದ್ದರೆಂದು ಸ್ಪಷ್ಟವಾಗುತ್ತದೆ.

ಇನ್ನೂ ಮುಂದುವರಿದು ಹೇಳುವುದಾದರೆ ಆಂಧ್ರ ಪ್ರದೇಶದಿಂದ ದ.ಕರ್ನಾಟಕಕ್ಕೆ ಬಂದ ಈ (ಆರಾಧ್ಯ) ಜಂಗಮರ ಪ್ರಭಾವಕ್ಕೆ ಉತ್ತರ ಕರ್ನಾಟಕ (ಶರಣ)ದ ಜಂಗಮರು ಒಳಗಾಗಿ, ತಮ್ಮ ಶರಣತತ್ವ - ಆಚರಣೆಗೆ ಬದಲು ಆರಾಧ್ಯರ ತತ್ವ - ಆಚರಣೆಗಳನ್ನು ನಂಬುವ, ಅವರ ಜಗದ್ಗುರುಗಳನ್ನು ತಮ್ಮ ಜಗದ್ಗುರುಗಳೆಂದು ಒಪ್ಪಿಕೊಳ್ಳುವ ಧರ್ಮಕ್ಕೆ ಅವರು ಬಳಸಿದ ವೀರಶೈವ ಪದವನ್ನು ಸ್ವೀಕರಿಸುವ ತಪ್ಪು ಮಾಡಿದರು. ಸಿರಸಂಗಿ ಲಿಂಗರಾಜರು, ಹಾನಗಲ್ಲ ಕುಮಾರಸ್ವಾಮಿಗಳು, ಅರಟಾಳ ರುದ್ರೇಗೌಡರು, ವಾರದ ಮಲ್ಲಪ್ಪನವರಂಥ ಅಂದಿನ ಸಮಾಜದ ಹಿರಿಯರು ಅವರ ಮಾತಿಗೆ ಮೋಸ ಹೋಗಿ ವೀರಶೈವ ಮಹಾಸಭಾ, ವೀರಶೈವ ಸಂಸ್ಕೃತ ಪಾಠಶಾಲೆ ಇತ್ಯಾದಿ ಹೆಸರುಗಳ ಸಂಸ್ಥೆಗಳನ್ನು ಸ್ಥಾಪಿಸುತ್ತ ನಡೆದರು. ಸಾಲದುದಕ್ಕೆ ಕರ್ನಾಟಕದ ಲಿಂಗಾಯತರನ್ನು ಆಂಧ್ರದ ವೀರಶೈವರು ಆಳುವುದಕ್ಕೆ ಪೂರಕವಾದ ಸಾಹಿತ್ಯವನ್ನು ಮಠಗಳಲ್ಲಿ ತಳವೂರಿದ ಶಾಸ್ತ್ರಿಗಳು, ವಿದ್ಯಾಸಂಸ್ಥೆಗಳಲ್ಲಿ ನೆಲೆ ನಿಂತಿದ್ದ ಅಧ್ಯಾಪಕರೂ ಸೃಷ್ಟಿಸುತ್ತ ಬಂದರು. ಇದರ ಜೊತೆಗೆ ಬೆಂಗಳೂರಿನಲ್ಲಿ ಸ್ಥಾಪಿಸಿದ (1905) ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಹೆಸರನ್ನು ಕರ್ನಾಟಕ ವಿರಶೈವ ವಿದ್ಯಾಭಿವೃದ್ಧಿ ಸಂಸ್ಥೆಯೆಂದು, ಸೊಲ್ಲಾಪುರದಲ್ಲಿ ಸ್ಥಾಪಿಸಿದ ಲಿಂಗಾಯತ ಅಸೋಶಿಯೇಶನ್ ಹೆಸರನ್ನು ವೀರಶೈವ ಮಹಾಜನ ಸಭೆ ಎಂದು ಆರಾಧ್ಯರಿಂದ ಪ್ರಭಾವಿತರಾದವರು ಬದಲಿಸಿದರು. ಈ ದಾಳಿ ಇನ್ನೂ ನಿಂತಿಲ್ಲವೆಂಬಂತೆ ಬಾಗಲ ಕೋಟೆ ಬಸವೇಶ್ವರ ವಿದ್ಯಾವರ್ಧಕ ಸಂಘದ ಹೆಸರನ್ನು ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘವೆಂದು ಮಾರ್ಪಾಡು ಮಾಡಿದರು. ಲಿಂಗಾಯತವನ್ನು ಕೆಡಹುವ ವೀರಶೈವವನ್ನು ಕಟ್ಟು ಇಂಥ ಉಪಕ್ರಮಗಳಿಂದಾಗಿ ಜಗತ್ತಿಗೆ ಕನ್ನಡಿಗರ ಕೊಡುಗೆಯಾದ ಶರಣ ಸಂಸ್ಕೃತಿ ಆಂಧ್ರದ ಆರಾಧ್ಯರ ಮುಷ್ಟಿಯಲ್ಲಿ ನರಳುತ್ತ ಬಂದಿತು.

-ಡಾ. ಎಂ.ಎಂ.ಕಲಬುರ್ಗಿ (ಪ್ರಜಾವಾಣಿ ವಾಚಕರವಾಣಿಯಿಂದ)




ಬೆಂಗಳೂರು ಕೆ.ಸಿ.ಜನರಲ್ ಆಸ್ಪತ್ರೆಯ ಮುಖ್ಯಸ್ಥರಾದ ಡಾ. ವಿಶ್ವಾರಾಧ್ಯ ಅವರಿಗೆ ಸತ್ಕಾರ.

ಬೆಂಗಳೂರು ಕೆ.ಸಿ.ಜನರಲ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ವಿಮಲಾ ಪಾಟೀಲ್ ಅವರಿಗೆ ಸತ್ಕಾರ



ದಿ.25-7-2009 ರಂದು ಮೆರವಣಿಗೆ ಮುಕ್ತಾಯದ ನಂತರ ಬಸವ ಪುತ್ಥಳಿಗೆ ಮಾಲಾರ್ಪಣೆ



ಮೆರವಣಿಗೆಯಲ್ಲಿ ಸುಮಂಗಲಿ ಸೇವಾಶ್ರಮದ ಮಕ್ಕಳು



ಶರಣೆ ಗುಹೇಶ್ವರಿಯಿಂದ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 108 ಚಿಕ್ಕ ಮಕ್ಕಳಿಗೆ ಶಾಲು ಮತ್ತು ಟೋಪಿ ವಿತರಣೆ



ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಬಸವ ಪಂಚಮಿಯಂದು ರಾಷ್ಟ್ರೀಯ ಬಸವ ದಳದವರಿಂದ ಹಣ್ಣು-ಹಾಲು ವಿತರಣೆ



26-07-2009 ರಂದು ಬೆಂಗಳೂರಿನ ಬಸವ ಮಂಟಪದಲ್ಲಿ ಸಂಸರಣೆಯ ಆಚರಣೆ.



ಆಂಧ್ರಪ್ರದೇಶದ ಜಹಿರಾಬಾದ್‌ನಲ್ಲಿ .19-7-2009ರಂದು ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಲೋಕಸಭಾ ಸದಸ್ಯ ಸುರೇಶ್ ಶೆಟಕಾರ್ ಅವರಿಗೆ ಸತ್ಕಾರ.



ಆಂಧ್ರಪ್ರದೇಶ ಪ್ರವಾಸೋದ್ಯಮ ಸಚಿವೆ ಗೀತಾ ರೆಡ್ಡಿಯವರಿಗೆ ಸತ್ಕಾರ









CPMG/KA/BGW-50/2009-2011 WPP(W) 17 R.No.19980/







